ಹಮೂರಾಬಿ

ಪ್ರೊ. ಎಚ್.ವಿ.ನಾಗೇಶ್



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಹಾಮುರಾಬಿ

ಎಚ್. ವಿ. ನಾಗೇಶ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨

HAMOORABI—Written by H. V. Nagesh
and Published by Karnataka Sahitya Akademy,
Nrupatunga Road, Bangalore-560002.

First Publication 1994 Pages : viii+48

ಮೊದಲನೇ ಮುದ್ರಣ ೧೯೯೪

ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಎರಡು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು–೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆ ಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯ ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸು ವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆ ಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿ ಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ-ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು

ಒಪ್ಪುವುದಿಲ್ಲ ; ಅಮಾನವೀಯತೆಯನ್ನು ಘೋಷಿಸುವುದಿಲ್ಲ. ಅದರ ಆದ್ಯತೆಗಳಲ್ಲಿ ಅಂತರವಿರಬಹುದು ; ಚಿಂತನೆಯಲ್ಲಿ ವೈರುಧ್ಯಗಳಿರಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒಸ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯುವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪ ಬರಗೂರು ರಾಮಚಂದ್ರಪ್ಪ
ಬೆಂಗಳೂರು ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು, ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ಎಚ್. ವಿ. ನಾಗೇಶ್

ಹಾಮೂರಾಬಿ

ಅಧ್ಯಾಯ ೧

ಜೀವನ ವೃತ್ತಾಂತ

ಸಾಮಾಜಿಕ ಚಿಂತನೆಯ ಇತಿಹಾಸವು ಬೆಬಿಲೋನಿಯದ ಪ್ರಸಿದ್ಧನಾದ ಅರಸು ಹಾಮೂರಾಬಿಯಿಂದ ಪ್ರಾರಂಭವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಅವನ ಕಾಲದ ಬಗೆಗೆ ಇನ್ನೂ ವಾದ-ವಿವಾದಗಳಿವೆ. ಅದು ಕ್ರಿಸ್ತಪೂರ್ವ ಸುಮಾರು ೨೧೨೩ ರಿಂದ ಸುಮಾರು ೨೦೮೧ ಎಂದು ಅಭಿಪ್ರಾಯವಿತ್ತು. ಈಚೆಗಿನ ಅಭಿಪ್ರಾಯದ ಪ್ರಕಾರ ಅದು ಕ್ರಿಸ್ತಪೂರ್ವ ೧೭೨೮ ರಿಂದ ೧೬೨೮. ಇನ್ನೊಂದು ಅಭಿಪ್ರಾಯದಂತೆ ಹಾಮೂರಾಬಿ ಸುಮಾರು ೪೨ ವರ್ಷಗಳ ಕಾಲ ರಾಜ್ಯವಾಳಿದ ನಂತರ ಕ್ರಿ.ಪೂ. ೧೭೫೦ ರಲ್ಲಿ ಮರಣಹೊಂದಿದ. ಏನಿದ್ದರೂ, ಸಾಮಾಜಿಕ ಚಿಂತನೆಯ ಕಥೆ ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ ಒಬ್ಬ ಅರಸನಿಂದ ಪ್ರಾರಂಭವಾಯಿತು ಎನ್ನಬಹುದು.

೧೯೩೫ರಲ್ಲಿ ಸುಪ್ರಸಿದ್ಧ ಇತಿಹಾಸಕಾರ ವಿಲ್‌ಡ್ಯುರಾಂಟರ 'ನಮ್ಮ ಪೌರ್ವಾತ್ಯ ಪರಂಪರೆ' ಪ್ರಕಟವಾದಾಗ ಹಾಮೂರಾಬಿಯ ಬಗೆಗೆ ಹೆಚ್ಚಿನ

ವೈಯಕ್ತಿಕ ಮಾಹಿತಿ ದೊರೆತಿರಲಿಲ್ಲ. ಕಳೆದ ಸುಮಾರು ೬೦ ವರ್ಷಗಳಲ್ಲಿ ಕೆಲವು ಹೊಸ ಮಾಹಿತಿ ಲಭ್ಯವಾಗಿದ್ದರೂ ಅದನ್ನು ಪರಿಪೂರ್ಣ ಎನ್ನುವಂತಿಲ್ಲ. ಸುಪ್ರಸಿದ್ಧವಾದ ಅವನ ಕರಿಕಲ್ಲಿನ ಶಾಸನವೂ ಜೇಡಿಮಣ್ಣಿನ ಇಟ್ಟಿಗೆಗಳಲ್ಲಿ ಕೊರೆದ ಅವನ ಕೆಲವು ಪತ್ರಗಳೂ ಬೇರೆ ಕೆಲವು ಮಾಹಿತಿಗಳೂ ಸಿಕ್ಕಿವೆ. ಆದರೂ ಅವು ಹಾಮೂರಾಬಿಯ ಜೀವನ ವೃತ್ತಾಂತವನ್ನು ಸಂಪೂರ್ಣವಾಗಿ ಹೇಳಲಾರವು.

ಈಗ ನಮಗೆ ತಿಳಿದಿರುವ ಸಂಗತಿಗಳೆಂದರೆ ಇಷ್ಟು: ಅವನು ಅಮಾರಿತಿಕ್ ವಂಶದ ಆರನೆಯ ರಾಜನಾಗಿ ೧೭೯೨ರಲ್ಲಿ ಪಟ್ಟಕ್ಕೆ ಬಂದ. ಅವನ ತಂದೆ ಸಿನ್ ಮುಬಲ್ಲಿತ್, ತಂಗಿ ಇಲ್ತಾನಿ, ಅವನ ಮೊದಲ ಮಗ ಶಂಸುಲುನಾ ಹಾಮೂರಾಬಿಯ ಮರಣಾನಂತರ ೧೭೫೦ರಲ್ಲಿ ಉತ್ತರಾಧಿಕಾರಿಯಾಗಿ ಪಟ್ಟವೇರಿದ. ಹಾಮೂರಾಬಿ ಪಟ್ಟಕ್ಕೆ ಬಂದಾಗ ಬೆಬಿಲೋನ್ ರಾಜ್ಯವು ಬೆಬಿಲೋನ್ ನಗರ ಮತ್ತು ಅದರ ಸುತ್ತಮುತ್ತಲಿನ ಭಾಗಗಳನ್ನು ಮಾತ್ರ ಒಳಗೊಂಡಿತ್ತು. ಒಳ್ಳೆಯ ಆಡಳಿತ ಮತ್ತು ತೆರಿಗೆ ವ್ಯವಸ್ಥೆಯ ಸಹಾಯದಿಂದ ಅವನು ತನ್ನ ಸೇನೆಯನ್ನು ಬಲಪಡಿಸಿದ. ಧರ್ಮಗುರುಗಳನ್ನೂ ಪ್ರಜೆಗಳನ್ನೂ ಏಕಕಾಲದಲ್ಲಿ ಸಂತುಷ್ಟಪಡಿಸುವ ಕಲೆ ಅವನಿಗೆ ಕರಗತವಾಗಿತ್ತು. ಧರ್ಮಗುರುಗಳ ಪ್ರೀತಿ ಸಂಪಾದಿಸಲು ಅವನು ಪ್ರಬಲ ಜನಾಂಗಗಳ ದೇವರಿಗಾಗಿ ಗುಡಿಗಳನ್ನು ಕಟ್ಟಿದ. ರಾಷ್ಟ್ರದ ಅಧಿದೇವತೆಯಾದ ಮರ್ಡಕ್ ಮತ್ತು ಅವನ ದೈವೀಪತ್ನಿಗಾಗಿ ಬೆಬಿಲೋನ್ ನಗರದಲ್ಲಿ ಭವ್ಯ ಮಂದಿರವನ್ನು ನಿರ್ಮಿಸಿದ. ಹಾಗೆಯೇ ಪ್ರಜೆಗಳನ್ನು ಸಂತುಷ್ಟಿಯಲ್ಲಿ ಇಡಲು ಅಲ್ಲಲ್ಲಿ ಧಾನ್ಯದ ಕಣಜಗಳನ್ನು ನಿರ್ಮಿಸಿದ. ಯುಫ್ರೆಟಿಸ್ ನದಿಗೆ ಸೇತುವೆಯನ್ನು ಕಟ್ಟಿಸಿದ ಮೇಲೆ ನದಿಯ ದಡಗಳ ಮೇಲೆ ಚಿಕ್ಕ ಮತ್ತು ದೊಡ್ಡ ಪಟ್ಟಣಗಳು ತಲೆಯೆತ್ತಿದವು. ನದಿಯಲ್ಲಿ ದೊಡ್ಡದೊಡ್ಡ ಹಡಗುಗಳು ಸಂಚಾರ ಮಾಡುತ್ತಿದ್ದವು. ಅವುಗಳಲ್ಲಿ ಒಟ್ಟು ಸುಮಾರು

ತೊಂಬತ್ತು ಸಾವಿರ ನಾವಿಕರು ಇರುತ್ತಿದ್ದರು. ಅವನ ಕಾಲದಲ್ಲಿ ಬೆಬಿಲೋನ್ ಜಗತ್ತಿನ ಅತ್ಯಂತ ವೈಭವದ ನಗರವಾಗಿ ಬೆಳೆಯಿತು.

ಹಾಮೂರಾಬಿ ಚತುರ ಆಡಳಿತಗಾರನಿದ್ದ ಎಂಬ ಬಗ್ಗೆ ಈಗ ಹೆಚ್ಚು ಪುರಾವೆಗಳು ಸಿಕ್ಕಿವೆ. ಪ್ರತಿವರ್ಷ ಅವನು ಏನಾದರೊಂದು ಸ್ಮರಣೀಯ ಕೆಲಸವನ್ನು ಮಾಡುತ್ತಿದ್ದಂತೆ ಕಾಣುತ್ತದೆ. ಅವನ ಹೆಸರಿನಲ್ಲಿರುವ ಒಂದು ಪಂಚಾಂಗ ಸಿಕ್ಕಿದೆ. ಅವನು ಪ್ರತಿವರ್ಷ ಏನೇನು ಮಾಡಿದ ಎಂದು ಅದು ಹೇಳುತ್ತದೆ. ಆಯಾ ವರ್ಷದ ಮುಖ್ಯ ಕೆಲಸಗಳನ್ನು ಪ್ರಸ್ತಾಪಿಸಿ 'ಇದು ಕೆರೆಕಟ್ಟಿದ ವರ್ಷ', 'ಇದು ಕೋಟೆ ಕಟ್ಟಿದ ವರ್ಷ', 'ಇದು ನಗರ ಕಟ್ಟಿದ ವರ್ಷ', 'ಕಾಲುವೆ ತೋಡಿದ ವರ್ಷ', 'ಗುಡಿ ಜೀರ್ಣೋದ್ಧಾರ ಮಾಡಿದ ವರ್ಷ', 'ಯುದ್ಧಮಾಡಿದ ವರ್ಷ' – ಹೀಗೆ ಅವನ ಆಡಳಿತದ ಪ್ರತಿಯೊಂದು ವರ್ಷಕ್ಕೂ ಒಂದು ಹೆಸರು ಕೊಡಲಾಗಿದೆ.

ಹಾಮೂರಾಬಿ ಯುಫ್ರೆಟಿಸ್ ನದಿಯ ನೀರನ್ನು ನಿಯಂತ್ರಿಸುವ ಮೂಲಕ ಕೃಷಿಯನ್ನು ಸಮೃದ್ಧಗೊಳಿಸಿದ. ಗೋಧಿಯನ್ನು ಸಂಗ್ರಹಿಸುವ ಕಣಜಗಳು ಯಾವಾಗಲೂ ತುಂಬಿರುತ್ತಿದ್ದವು. ಜನರಿಗೂ ಸೈನಿಕರಿಗೂ ಆಹಾರದ ಕೊರತೆ ಕಂಡುಬರಲಿಲ್ಲ. ಸೈನ್ಯ ಬಲದಿಂದ ಸುತ್ತಮುತ್ತಲಿನ ರಾಜ್ಯಗಳನ್ನು ಗೆದೆಯುತ್ತ ಹೋಗುವುದು ಸಾಧ್ಯವಾಯಿತು. ಇದರಿಂದ ಅನೇಕ ಸಣ್ಣಪುಟ್ಟ ರಾಜ್ಯಗಳ ರಾಜರು ಅವನ ವಿರೋಧಿಗಳಾದರು. ಆದರೆ ಹಾಮೂರಾಬಿ ಜಗ್ಗಲಿಲ್ಲ. ಅವನಿಗೆ ತನ್ನ ಪ್ರಜೆಗಳ ಬೆಂಬಲ ಮತ್ತು ಪ್ರೀತಿಯಿತ್ತು.

ಅವನ ಬಾಲ್ಯದ ಹೆಸರು ಏನೋ ತಿಳಿಯದು. ಆದರೆ ನಾವು ಕರೆಯುವ ಹಾಮೂರಾಬಿ ಎಂಬ ಹೆಸರು ಅವನ ನಿಜವಾದ ಹೆಸರಲ್ಲ. ಅದು ಅವನು ತನ್ನನ್ನೇ ತಾನು ಕರೆದುಕೊಂಡ ಹೆಸರು ಅಥವಾ ಜನರು ಅವನನ್ನು ಕರೆಯುತ್ತಿದ್ದ ಹೆಸರು. 'ಹಾಮೂರಾಬಿ' ಎಂದರೆ 'ಪ್ರೀತಿಯ ಚಿಕ್ಕಪ್ಪ'. ಜನರ ಪ್ರೀತಿಯನ್ನು ಅವನು ಧಾರಾಳವಾಗಿ ಪಡೆದಿದ್ದ. ಆ ಪ್ರೀತಿ ಸಕಾರಣವಾಗಿತ್ತು. ಅವನು ರಾಜಧಾನಿಯನ್ನು

ಸುಂದರಗೊಳಿಸಿದ್ದ. ಪ್ರಜೆಗಳಿಗೆ ಬೇಕಾದ ವಿಪುಲ ಸೌಕರ್ಯಗಳನ್ನು ಒದಗಿಸಿದ್ದ. 'ಹಾಮೂರಾಬಿ ನಹಸ್ ನಿಶಿ' (ಅಂದರೆ ಸಮೃದ್ಧನಾದ ಹಾಮೂರಾಬಿ) ಎಂಬ ಹೆಸರಿನ ಒಂದು ದೊಡ್ಡ ಕಾಲುವೆಯನ್ನು ತೋಡಿಸಿ ಟೈಗ್ರಿಸ್ ನದಿಯು ಕಾಲಕಾಲಕ್ಕೆ ತಂದೊಡ್ಡುತ್ತಿದ್ದ ನೆರೆಹಾವಳಿಯ ಸಂಕಟದಿಂದ ತನ್ನ ಜನರನ್ನು ಪಾರುಮಾಡಿದ್ದ. ಹಾಗೆಯೇ ಗುಲಾಮರ ಶ್ರಮದಿಂದ ಬೃಹತ್ ಮಾರ್ಗಗಳನ್ನು ನಿರ್ಮಿಸಿದ್ದ. ದೊಡ್ಡ ದೇವಾಲಯವನ್ನು ಕಟ್ಟಿಸಿ ಜನಪ್ರಿಯನೂ ಆದ. ಬೆಬಿಲೋನ್ ನಗರ ದೇವತೆಯಾದ ಮರ್ಡುಕ್‌ನನ್ನು ತನ್ನ ಸಾಮ್ರಾಜ್ಯದ ರಕ್ಷಕ ದೇವರನ್ನಾಗಿ ಮಾಡಿಕೊಂಡ.

ಈ ಜನಪ್ರಿಯತೆಯ ಜೊತೆಗೇ ರಾಜಕೀಯ ಚಾಣಾಕ್ಷತೆಯಿಂದ ಆತ ರಾಜ್ಯ ವಿಸ್ತರಣೆಯನ್ನೂ ಸಾಧಿಸಿದ. ಸುತ್ತಲಿನ ಅನೇಕ ನಗರಗಳನ್ನೂ ರಾಜ್ಯಗಳನ್ನು ಅವು ದುರ್ಬಲವಾದ ಸಮಯ ನೋಡಿ ತನ್ನ ಅಧಿಪತ್ಯದಲ್ಲಿ ಸೇರಿಸಿಕೊಂಡ. ವಿವಿಧ ಬುಡಕಟ್ಟು ಜನಾಂಗಗಳನ್ನು ಒಗ್ಗೂಡಿಸಿದ. ಒಂದು ಶಕ್ತಿಶಾಲಿಯಾದ ಸರಕಾರವನ್ನು ಕೊಟ್ಟ. ಪರ್ಶಿಯನ್ ಆಖಾತದಿಂದ ಉತ್ತರ–ಪಶ್ಚಿಮವಾಗಿ ಭೂಮಧ್ಯ ಸಮುದ್ರದ ಕರಾವಳಿಗುಂಟ ಇರುವ ವಿಶಾಲವಾದ ಪ್ರದೇಶವು ಅವನ ಅಧಿಪತ್ಯದಲ್ಲಿತ್ತು. ಮೂವತ್ತು ಲಕ್ಷಕ್ಕಿಂತ ಹೆಚ್ಚು ಜನರು ಅವನ ಆಳ್ವಿಕೆಯಲ್ಲಿ ಒಗ್ಗೂಡಿದ್ದರು. ಬೆಬಿಲೋನ್ ಅವನ ಕಾಲದಲ್ಲಿ ಪಶ್ಚಿಮ ಏಶಿಯದ ರಾಜಕೀಯ, ಬೌದ್ಧಿಕ ಹಾಗೂ ಧಾರ್ಮಿಕ ಕೇಂದ್ರವಾಗಿತ್ತು.

ಹಾಮೂರಾಬಿಯ ಶಕ್ತಿಸಾಮರ್ಥ್ಯದ ಗುಟ್ಟು ಯುಫ್ರೆಟಿಸ್ ನದಿಯ ನೀರಿನ ಮೇಲೆ ಆತ ಹೊಂದಿದ್ದ ನಿಯಂತ್ರಣ ಎಂದರೆ ತಪ್ಪಿಲ್ಲ. ಆ ನೀರನ್ನು ಆತ ನೀರಾವರಿಗೆ ಬಳಸಿಕೊಂಡಿದ್ದಂತೂ ಸರಿ; ಆದರೆ ಅದನ್ನು ಇನ್ನೊಂದು ಉಪಯೋಗಕ್ಕೆ ಕೂಡ ಆತ ಬಳಸಿಕೊಂಡ. ನೆರೆಯ ಲಾರ್ಸಾ ರಾಜ್ಯವು ಈ ನದಿಯ ನೀರಿಗಾಗಿ ಕಲಹ ನಡೆಸಿತ್ತು. ನದೀ ಪ್ರವಾಹದ ಕೆಳಗಿರುವ ಈ ರಾಜ್ಯವನ್ನು ಹಾಮೂರಾಬಿ

ಹಣ್ಣುಗಾಯಿ ನೀರುಗಾಯಿ ಮಾಡಿದ. ಅವನು ಬಳಸಿದ ತಂತ್ರ ಅತಿ ಸರಳ. ನೀರಿಗೆ ಅಡ್ಡಕಟ್ಟೆ ಒಮ್ಮೆಲೆ ನೀರು ಹರಿಯಬಿಟ್ಟು ನೆರೆ ಬರಿಸುತ್ತಿದ್ದ. ಅಥವಾ ಕೆಲವೊಮ್ಮೆ ಕೆಳಭಾಗದ ಲಾರ್ಸಾ ರಾಜ್ಯಕ್ಕೆ ನೀರಿನ ಹನಿಯೂ ಸಿಗದಂತೆ ಮಾಡುತ್ತಿದ್ದ. ಹೀಗೆ ತನಗೆ ಸದಾ ಕಿರಿಕಿರಿಯನ್ನುಂಟುಮಾಡುತ್ತಿದ್ದ ಲಾರ್ಸಾದ ರಾಜ ರಿಮ್–ಸಿನ್‌ನನ್ನು ಹಾಮೂರಾಬಿ ಆರಾರು ತಿಂಗಳು ಸತಾಯಿಸಿ ಬಗ್ಗುಬಡೆದ. ಇವೆಲ್ಲ ಆದ ಮೇಲೆ ಸುಮಾರು ಇಪ್ಪತ್ತು ವರ್ಷಗಳ ಕಾಲ ಯುದ್ಧದ ಉಸಾಬರಿಗೆ ಹೋಗದೆ ವ್ಯವಸ್ಥಿತ ಆಡಳಿತೆಯತ್ತ ಗಮನ ಹರಿಸಿ ಬೆಬಿಲೋನಿನ ವ್ಯಾಪ್ತಿಯನ್ನೂ ಖ್ಯಾತಿಯನ್ನೂ ಹೆಚ್ಚಿಸಿದ. ದುರದೃಷ್ಟವಶಾತ್ ಅವನ ಆಳ್ವಿಕೆಯ ಕೊನೆಯ ಹದಿನಾಲ್ಕು ವರ್ಷಗಳಲ್ಲಿ ಆತ ಒಂದಲ್ಲ ಒಂದು ಯುದ್ಧದಲ್ಲಿ ಪಾಲುಗೊಳ್ಳುವಂತಾಯಿತು.

ಇಷ್ಟು ಮುಖ್ಯ ಮಾಹಿತಿಯ ಹೊರತಾಗಿ ಸಿಗುವ ಜೀವನ ವೃತ್ತಾಂತ ತೀರ ಅತ್ಯಲ್ಪ. ಹಾಮೂರಾಬಿ ಎಂದರೆ ಅವನ ಶಾಸನ ಎಂಬ ಮಾತೇ ಸತ್ಯ.

ಅಧ್ಯಾಯ ೨

ಕರಿಗಲ್ಲಿನ ಅದ್ಭುತ ಶಾಸನ

ಹಾಮೂರಾಬಿಯ ಕೀರ್ತಿ ಅಮರವಾಗಿರುವುದು ಅವನ ವಿಸ್ತೃತ ವಾದ ಸಾಮ್ರಾಜ್ಯಕ್ಕಾಗಿ ಅಲ್ಲ; ಅವನ ಸೈನಿಕ ಚಾತುರ್ಯ ಅಥವಾ ಆಡಳಿತದ ದಕ್ಷತೆಗಾಗಿಯೂ ಅಲ್ಲ. ಆ ಕೀರ್ತಿ ಅವನು ಕೊಟ್ಟ ಶಾಸನಕ್ಕೆ ಸಲ್ಲುತ್ತದೆ.

ಅದು ದೊರೆತದ್ದು ೧೯೦೧ರಲ್ಲಿ. ಪರ್ಶಿಯಾದ ಸೂಸಾ ನಗರದಲ್ಲಿ ಜೀನ್ ವಿನ್ಸೆಂಟ್ ಶೀಲ್ ನಾಯಕತ್ವದಲ್ಲಿ ಫ್ರೆಂಚ್ ಪ್ರಾಚ್ಯವಸ್ತು ಸಂಶೋಧಕರು ಶೋಧ ನಡೆಸಿದಾಗ ಮೂರು ತುಂಡುಗಳಾದ ಒಂದು ಕರಿಗಲ್ಲಿನ ಶಾಸನ ದೊರೆಯಿತು. ಈ ಶಾಸನವೇ ಮಾನವ ಇತಿಹಾಸದಲ್ಲಿ ಬರವಣಿಗೆಯಲ್ಲಿ ಸಿಗುವ ಅತಿ ಪ್ರಾಚೀನ ನ್ಯಾಯಸೂತ್ರವೆಂದು ಹೇಳಬೇಕು. ಇದಕ್ಕೂ ಮುಂಚಿನ ಕಾಲದ ಬರವಣಿಗೆಗಳು ಸಿಗಬಹುದೇನೋ ನಿಜ. ಇದಕ್ಕೂ ಮೊದಲಿನ ನ್ಯಾಯಸೂತ್ರಗಳು ಸಿಗುವುದೂ ನಿಜ. ಆದರೂ ಬರವಣಿಗೆಗೆ ಇಳಿಸಿದ ಮಹತ್ವಪೂರ್ಣವಾದ ಶಾಸನವೆಂದರೆ ಇದೊಂದೇ.

ಇತ್ತೀಚೆಗೆ ಇತಿಹಾಸಕಾರರು ಅಭಿಪ್ರಾಯ ಪಡುವಂತೆ ಈ ಕರಿಗಲ್ಲಿನ ಕಂಬ ಮೂಲದಲ್ಲಿ ಬೆಬಿಲೋನಿನ ರಾಷ್ಟ್ರದೇವತೆಯಾದ

ಮರ್ಡಕ್‌ನ ದೇವಾಲಯದ ಹೊರಗಿನ ಸುತ್ತಿನಲ್ಲಿ ಇತ್ತಂತೆ. ಮುಂದೆ ಕ್ರಿ.ಪೂ. ೧೧೦೦ರ ಸುಮಾರಿಗೆ ಬೆಬಿಲೋನಿನ ಯುದ್ಧದಲ್ಲಿ ಜಯಶಾಲಿಯಾದ ಯಾರೋ ಅದನ್ನು ವಿಜಯದ ಕುರುಹಾಗಿ ಅದನ್ನು ಬೆಬಿಲೋನಿನಿಂದ ಈಲಂಗೆ ಒಯ್ದಂತೆ ಕಾಣುತ್ತದೆ. ಅದನ್ನು ನಂತರ ಸೂಸಾಕ್ಕೆ ಯಾರು ಒಯ್ದರೋ ಗೊತ್ತಿಲ್ಲ. ಸತತವಾಗಿ ನಡೆಯುತ್ತಿದ್ದ ಯುದ್ಧಗಳ ಗೊಂದಲದಲ್ಲಿ ಇಂಥ ಅಪರೂಪದ ವಸ್ತುಗಳನ್ನು ಗೆದ್ದವರು ಸೋತವರಿಂದ ಪಡೆದುಕೊಳ್ಳುವುದು ಸಹಜ. ಇರಲಿ, ಅದೀಗ ಪ್ಯಾರಿಸಿನ ಲೌರ್ ವಸ್ತುಸಂಗ್ರಹಾಲಯದಲ್ಲಿ ಸುರಕ್ಷಿತವಾಗಿ ಉಳಿದುಕೊಂಡಿದೆ.

ಸುಪ್ರಸಿದ್ಧ ಶಾಸನವನ್ನು ಕೊರೆಯಿಸಿಕೊಂಡಿದ್ದ ಈ ಕರಿಗಲ್ಲಿನ ಕಂಬ ಸುಮಾರು ಎಂಟು ಅಡಿ ಎತ್ತರವಾಗಿದ್ದು ಆಳದಲ್ಲಿ ಏಳು ಅಡಿ ಸುತ್ತಳತೆಯನ್ನು ಹೊಂದಿದೆ. ಕರಿಗಲ್ಲಿನ ಸುತ್ತಲೂ ಪ್ರಾಚೀನ ಶಿಲ್ಪಲಿಪಿಯಾದ ಬೆಣೆಲಿಪಿಯಲ್ಲಿ ಕೊರೆದ ಒಟ್ಟು ೨೮೨ ಸೂತ್ರಗಳಿವೆ. ಇವುಗಳಲ್ಲಿ ಮೂರು ಸೂತ್ರಗಳು ಪೂರ್ಣವಾಗಿ ಹಾಳಾಗಿ ಹೋಗಿವೆ. ಆದರೆ ಬೇರೆ ಮೂಲಗಳಿಂದ ಲುಪ್ತವಾದ ಈ ಮೂರು ಸೂತ್ರಗಳು ಯಾವುದೆಂಬುದು ಈಗ ತಿಳಿದಿದೆ.

ಕರಿಗಲ್ಲಿನ ಕಂಬದ ಮೇಲ್ಭಾಗದಲ್ಲಿ ಹಾಮೂರಾಬಿ ಸೂರ್ಯ-ದೇವ ಶಮಶ್‌ನಿಂದ ಈ ಸೂತ್ರಗಳನ್ನು ಪಡೆಯುತ್ತಿರುವ ದೃಶ್ಯವನ್ನು ಕೊರೆಯಲಾಗಿದೆ. ಈ ಸನ್ನಿವೇಶ ಮುಂದೆ ಅನೇಕ ಶತಮಾನಗಳ ನಂತರ ಸಿನಾಯ್ ಪರ್ವತದ ಮೇಲೆ ಮೋಸೆಸ್‌ನು ಯಹೋವಾನಿಂದ 'ಹತ್ತು ಆದೇಶ' (ಟೆನ್ ಕಮಾಂಡಮೆಂಟ್ಸ್)ಗಳನ್ನು ಸ್ವೀಕರಿಸಿದ ಸಂದರ್ಭವನ್ನು ನೆನಪಿಗೆ ತರುತ್ತದೆ. ಈ ಶಾಸನದ ನ್ಯಾಯಸೂತ್ರಗಳು ಧಾರ್ಮಿಕ ಚಿಂತನೆಗಳಾಗಿರದೆ ಲೌಕಿಕ ಚಿಂತನೆಗಳೇ ಆಗಿದ್ದರೂ ಸೂರ್ಯ-ದೇವ ಶಮಸ್‌ನಿಂದ ಪಡೆದವುಗಳು ಎಂದು ಪ್ರಜೆಗಳ ಮನಸ್ಸಿನಲ್ಲಿ ಬಿಂಬಿಸುವ ಉದ್ದೇಶ ಸ್ಪಷ್ಟ.

ಈ ಚಿತ್ರದ ಕೆಳಗೆ ಸಮತಲದ ಇಪ್ಪತ್ತೊಂದು ಅಂಕಣಗಳಿವೆ. ಒಟ್ಟಿಗೆ ಸುಮಾರು ೩೬೦೦ ಸಾಲುಗಳಲ್ಲಿ ಜಗತ್ತಿನ ಅತಿ ಪ್ರಾಚೀನವಾದ ಹಾಗೂ ಪ್ರಬುದ್ಧವಾದ ಶಾಸನ ಲಿಪಿ ಇಲ್ಲಿದೆ.

ಇಲ್ಲಿಯ ಮೊದಲ ಕೆಲವು ಅಂಕಣಗಳಲ್ಲಿ ಆತ್ಮಸ್ತುತಿಪರವಾದ ಒಂದು ಉಪೋದ್ಘಾತವಿದೆ. ಇದರ ಸ್ವಲ್ಪ ಭಾಗವನ್ನು ನಾವು ಇಲ್ಲಿ ಕೊಡಬಹುದು:

''ಸ್ವರ್ಗ ಮತ್ತು ಮರ್ತ್ಯಗಳ ಪ್ರಭುವೂ 'ಅನುನಕಿ' ಮತ್ತು 'ಬೇಲ್'ಗಳ ರಾಜನೂ.... ಆದ ಮಹಾಮಹಿಮ ಆನುವು... ಮಹಾನ್ ರಾಜಕುಮಾರನೂ ದೇವಭಕ್ತನೂ ಆದ ನನ್ನನ್ನು ಅಂದರೆ ಹಾಮೂರಾಬಿಯನ್ನು ಭೂಮಿಯಲ್ಲಿ ನ್ಯಾಯವು ನೆಲೆಗೊಳಿಸಲೆಂದೂ ದುರಾತ್ಮರು ಮತ್ತು ಕೆಡುಕರನ್ನು ನಾಶಗೊಳಿಸಲೆಂದೂ ಬಲಾಢ್ಯರು ಬಲಹೀನರನ್ನು ಹಿಂಸಿಸುವುದನ್ನು ತಡೆಯಲೆಂದೂ..... ನಾಡಿನಲ್ಲಿ ಜ್ಞಾನವೂ ಪ್ರಜಾಕಲ್ಯಾಣವೂ ವೃದ್ಧಿಯಾಗಲೆಂದೂ ನಿಯಮಿಸಿದನು....''

''ನಾನು ಬೇಲ್‌ದಿಂದ ನೇಮಕಗೊಂಡವನು. ನಾನು ಸಮೃದ್ಧಿಯನ್ನೂ ಸಂಪತ್ತನ್ನೂ ತಂದುಕೊಟ್ಟವನು... ನಿಪ್ಪೂರ ಮತ್ತು ದುರಿಲು ನಗರಗಳ ನಿರ್ಮಾಣ ಪೂರ್ತಿಗೊಳಿಸಿದವನು. ಉರುಕ್ ನಗರಕ್ಕೆ ಜೀವಕಳೆಕೊಟ್ಟವನು. ಅಲ್ಲಿಯ ನಿವಾಸಿಗಳಿಗೆ ಯಥೇಚ್ಛ ನೀರನ್ನು ಒದಗಿಸಿದವನು... ಬೊರ್ಸಿಪ್ಪಾ ನಗರವನ್ನು ಸುಂದರಗೊಳಿಸಿದವನು ನಾನೇ. ಮಹಾನ್ ಉರುಕ್‌ಗಾಗಿ ಧಾನ್ಯದ ಕಣಜವನ್ನು ತುಂಬಿಸಿಕೊಟ್ಟವನು ನಾನೇ. ಪ್ರಜೆಗಳು ಸಂಕಟದಲ್ಲಿದ್ದಾಗ ಅವರಿಗೆ ಪರಿಹಾರ ಒದಗಿಸಿದವನೂ ಬೆಬಿಲೋನ್ ನಗರದ ಜೀವಸೊತ್ತುಗಳಿಗೆ ಸಂರಕ್ಷಣೆ ಒದಗಿಸಿದವನೂ ನಾನೇ. ನಾನು ಪ್ರಜೆಗಳನ್ನು ಆಳುವವನು, ಪ್ರಜೆಗಳ ಆಳಾದವನು.

...ನಾನು ಹಾಮೂರಾಬಿ–ನುಖುಷ್–ನಿಶಿ (ಪ್ರಜೆಗಳ ಭಾಗ್ಯ ಹಾಮೂರಾಬಿ) ಕಾಲುವೆಯನ್ನು ಕಟ್ಟಿ ಸುಮೇರು ಮತ್ತು ಅಕ್ಕಾಡಗಳ

ಜನರಿಗೆ ಸಮೃದ್ಧವಾಗಿ ನೀರುಣ್ಣಿಸಿದ್ದೇನೆ. ಕಾಲುವೆಯ ಇಕ್ಕೆಡೆಗಳಲ್ಲಿ ನಾನು ನೆಲಕ್ಕೆ ನೀರುಣಿಸಿದ್ದಲ್ಲದೆ ಅವರ ಧಾನ್ಯದ ಕಣಜಗಳನ್ನು ತುಂಬಿಸಿದ್ದೇನೆ.... ಚದುರಿಹೋದ ಜನಾಂಗಗಳನ್ನು ನಾನು ಒಗ್ಗೂಡಿಸಿದ್ದೇನೆ. ನೆಮ್ಮದಿಯ ನೆಲೆಗಳಲ್ಲಿ ನೆಲೆಸುವಂತೆ ಮಾಡಿದ್ದೇನೆ."

ಈ ನ್ಯಾಯಸೂತ್ರಗಳನ್ನು ಓದುತ್ತಿರುವಾಗ ಯಾವುದೋ ಒಂದು ಪ್ರಾಚೀನ ದಾಖಲೆಯೆನ್ನಿಸುವುದಿಲ್ಲ, ಪುರಾಣ ಪುಣ್ಯಕಥೆಯೆನ್ನಿಸುವುದಿಲ್ಲ. ಇದನ್ನು ಹೋಲುವ ಸುಮೇರಿಯನ್ ಶಾಸನ ಆರುಸಾವಿರ ವರ್ಷದಷ್ಟು ಹಳೆಯದು. ಇತರ ಅನೇಕ ಶಾಸನಗಳು ರಾಜನನ್ನು ಸುಮ್ಮನೆ ಹೊಗಳುವಂಥವು. ಕೆಲವು ಧರ್ಮದ ಹೆಸರಿನಲ್ಲಿ ಸುಳ್ಳಿನ ಕಥೆಯನ್ನು ಹೆಣೆಯುವಂಥವು. ಇದೊಂದೇ ಶಾಸನ ಚರಿತ್ರೆಗೂ ಸಾಮಾಜಿಕ ಶಾಸನಕ್ಕೂ ಮಾದರಿಯಾಗಿ ನಿಲ್ಲುವಂಥ ಶಕ್ತಿ ಪಡೆದಿದೆ. ಲೌಕಿಕ ಮತ್ತು ಧರ್ಮನಿರಪೇಕ್ಷವಾದ ಈ ಶಾಸನವನ್ನು ಸರಿಗಟ್ಟುವ ಬೇರೆ ಶಾಸನವನ್ನು ಪ್ರಾಚೀನ ಜಗತ್ತು ನೀಡಿಲ್ಲ.

ಮೇಲೆ ಹೇಳಿದ ಉಪೋದ್ಘಾತದಲ್ಲಿ ಹೆಗ್ಗಳಿಕೆಯ ಮಾತುಗಳಿವೆ, ನಿಜ. ಆದರೆ ಹಾಮೂರಾಬಿಯ ವಿಷಯದಲ್ಲಿ ಇವು ಉತ್ಪ್ರೇಕ್ಷೆಯ ಮಾತುಗಳಲ್ಲ. ಅದೇನೇ ಇರಲಿ, ಈ ಆತ್ಮಸ್ತುತಿಯ ಉಪೋದ್ಘಾತದ ನಂತರ ಕೆಳಗಿನ ಅಂಕಣಗಳಲ್ಲಿ ವಿವಿಧ ವಿಷಯಗಳ ಬಗೆಗೆ ಇರುವ ನ್ಯಾಯಸೂತ್ರಗಳಿವೆ. ಕೊನೆಯಲ್ಲಿ ಅಶೋಕನ ಶಾಸನದ ವಾಕ್ಯಗಳನ್ನು ನೆನಪಿಗೆ ತರುವ ಒಂದು ಉಪಸಂಹಾರವಿದೆ. ಅಲ್ಲಿನ ಒಂದು ಸುಂದರವಾದ ಭಾಗ ಹೀಗೆ ಇದೆ:

"ಸುಮೇರು ಮತ್ತು ಅಕ್ಕಡಗಳ ಜನರನ್ನು ನಾನು ಎದೆಯೊಳಗಿಟ್ಟು ಸಲಹಿದ್ದೇನೆ...... ಬಲವಂತನು ಬಲಹೀನನನ್ನು ತುಳಿಯದಂತೆ, ಅನಾಥರಿಗೂ ವಿಧವೆಯರಿಗೂ ನ್ಯಾಯವು ಸಿಗುವಂತೆ, ನಾನು ನನ್ನ ಜ್ಞಾನದ ಬಲದಿಂದ ಅವರನ್ನು ಸದಾ ನಿಯಂತ್ರಿಸಿದ್ದೇನೆ. ದುಃಖಿತರು ಯಾರಾದರೂ ಇದ್ದರೆ ನ್ಯಾಯ ದೇವತೆಯಾದ ನನ್ನ

ಪ್ರತಿಮೆಯ ಇದಿರು ಬರಲಿ, ಈ ನನ್ನ ಶಿಲಾಶಾಸನದಲ್ಲಿ ಬರೆದುದನ್ನು ಓದಲಿ.... ಅವರಿಗೆ ತಮ್ಮ ಕೃತಿಯ ಬಗೆಗೆ ಸರಿಯಾಗಿ ತಿಳಿವಳಿಕೆಯಾಗಲಿ; ಮನಸ್ಸಿಗೆ ನೆಮ್ಮದಿಯಾಗಿ ಅವರು ಹೀಗೆ ಹೇಳುವರು: 'ಪ್ರಜೆಗಳಿಗೆ ನಿಜವಾದ ತಂದೆಯಂತಿರುವ ರಾಜನೆಂದರೆ ಹಾಮೂರಾಬಿಯೊಬ್ಬನೇ..... ಪ್ರಜೆಗಳಿಗೆ ಶಾಶ್ವತವಾದ ಸಮೃದ್ಧಿಯನ್ನು ತಂದವನು ಅವನೊಬ್ಬನೇ; ಜನರಿಗೆ ನಿಜವಾದ ಸರಕಾರವನ್ನು ಕೊಟ್ಟವನೂ ಅವನೊಬ್ಬನೇ."

ಮಹಾನ್ ದೊರೆಯೊಬ್ಬನಿಗೆ ಒಪ್ಪುವ ಭರತವಾಕ್ಯ!

ಅಧ್ಯಾಯ ೩

೨೮೫ ನ್ಯಾಯಸೂತ್ರಗಳು

ಹಿಂದೆ ಹೇಳಿದ ಹಾಗೆ ಸೂಸಾದಲ್ಲಿ ದೊರೆತ ಕರಿಗಲ್ಲಿನ ಕಂಬದ ಮೇಲೆ ಒಟ್ಟು ೨೮೨ ಸೂತ್ರಗಳು ಇವೆ. ಕಂಬದ ಮಧ್ಯಭಾಗದಲ್ಲಿರುವ ಕೆಲವು ಸೂತ್ರಗಳು ಕೆತ್ತಿಹೋಗಿ ಅವೇನೆಂದು ತಿಳಿಯುವುದು ಸಾಧ್ಯವಿಲ್ಲವಾದರೂ ಬೇರೆ ಕಡೆ ದೊರೆತ ಆಧಾರಗಳ ಮೇಲಿಂದ ಎಲ್ಲ ೨೮೨ ಸೂತ್ರಗಳನ್ನೂ ನಾವು ಇಂದು ತಿಳಿದಿದ್ದೇವೆ. ಬೇರೆ ಕಡೆ ದೊರೆತ ಇನ್ನೂ ಮೂರು ನ್ಯಾಯಸೂತ್ರಗಳನ್ನು ಇವುಗಳ ಜೊತೆ ಸೇರಿಸಿದರೆ ಒಟ್ಟು ೨೮೫ ಸೂತ್ರಗಳೆಂದು ಲೆಕ್ಕಹಿಡಿಯಬಹುದು.

ಹಾಮುರಾಬಿಯ ಶಾಸನದ ವಸ್ತುವು ವೈವಿಧ್ಯಮಯವಾದುದು. ಅತ್ಯಾಧುನಿಕ ರೀತಿಯಲ್ಲಿ ತಲೆಬರಹಗಳನ್ನು ಕೊಟ್ಟು ವಿವಿಧ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಅವುಗಳಲ್ಲಿ ಈ ಕೆಲವು ತಲೆಬರಹಗಳನ್ನು ವಿಶೇಷವಾಗಿ ಪ್ರಸ್ತಾಪಮಾಡಬಹುದು: ವೈಯಕ್ತಿಕ ಆಸ್ತಿ, ಭೂಮಿಕಾಣಿ, ವ್ಯಾಪಾರ-ವ್ಯವಹಾರ, ಕುಟುಂಬ, ವ್ಯಕ್ತಿಗಾದ ನೋವು ಮತ್ತು ಅನ್ಯಾಯಗಳು, ಸ್ತ್ರೀಯರ ಹಕ್ಕುಗಳು, ಪರಾರಿಯಾವ ಗುಲಾಮರು. ಋಣ ಸಂದಾಯ, ಕುರಿಯ ಉಣ್ಣೆಯನ್ನು ತೆಗೆಯುವ ರೀತಿ, ವಿವಾಹ ವಿಚ್ಛೇದನ, ಗೃಹಿಣಿಯು ಗೃಹಕೃತ್ಯ ನಿರ್ಲಕ್ಷಿಸುವುದು,

ಕಳವು, ಯುದ್ಧದಲ್ಲಿ ಹೇಡಿತನ, ಕಾರ್ಮಿಕರ ಕಾಯ್ದೆಗಳು, ಬೇರೆ.., ಕಲಬೆರಕೆ ಪದಾರ್ಥಗಳನ್ನು ಮಾರುವುದಕ್ಕೆ ಶಿಕ್ಷೆ, ವೈದ್ಯವೃತ್ತಿಯ ಸಂಭಾವನೆ, ಕೂಲಿ, ವೇತನಗಳು ಇತ್ಯಾದಿ ಇತ್ಯಾದಿ.

ಪ್ರಾಚೀನ ಕಾಲದಲ್ಲಿ ಇಷ್ಟು ವ್ಯಾಪಕವಾದ ಶಾಸನವನ್ನು ಭಾರತದ ಮನು ಒಬ್ಬನನ್ನು ಬಿಟ್ಟರೆ ಮತ್ತೆ ಯಾರೂ ಕೊಟ್ಟಿಲ್ಲ. ಹಾಮೂರಾಬಿ ಶಾಸನದ ಕಾಲ ಮನುಸ್ಮೃತಿಯ ಕಾಲಕ್ಕಿಂತ ಏನಿಲ್ಲೆಂದರೂ ಒಂದೂವರೆ ಸಾವಿರ ವರ್ಷದಷ್ಟು ಹಿಂದಿನದು ಎಂದು ನೆನಪುಮಾಡಿಕೊಂಡರೆ ಈ ಪ್ರಾಚೀನ ಶಾಸನದ ಹಿರಿಮೆ ಅರ್ಥವಾದೀತು. ಹಾಮೂರಾಬಿಯ ಶಾಸನವಲ್ಲಿರುವ ಕೆಲವು ಸೂತ್ರಗಳು ಹಾಮೂರಾಬಿಯ ಕಾಲಕ್ಕಿಂತ ಮೊದಲೇ ಇದ್ದವು ಎಂಬುದು ನಿರ್ವಿವಾದ. ಕೆಲವಂತೂ ಈಗ ೬೦೦೦ ವರ್ಷದಷ್ಟು ಹಳೆಯದಾದ ಸುಮೇರಿಯನ್ ಸೂತ್ರಗಳನ್ನು ಹೋಲುತ್ತವೆ. ಹೀಗೆ ಅವನು ಸಂಪ್ರದಾಯದಿಂದ ಇದ್ದುದನ್ನು ಇದ್ದಹಾಗೆ ಎತ್ತಿಕೊಂಡಿರುವುದೂ ಉಂಟು. ಇನ್ನು ಕೆಲವನ್ನು ಅವನು ಕೆಲವು ಮಾರ್ಪಾಟುಗಳೊಂದಿಗೆ ಸ್ವೀಕರಿಸಿದ್ದಾನೆ. ಮತ್ತೆ ಕೆಲವನ್ನು ಸ್ವಂತ ಅನುಭವದಿಂದ ಸೇರಿಸಿದ್ದಾನೆ. ನಾವು ಸಾಮಾಜಿಕ ನ್ಯಾಯದ ಸೂತ್ರಗಳೆನ್ನುವ ಕೆಲವು ಸೂತ್ರಗಳಂತೂ ಹಾಮೂರಾಬಿಯ ಸ್ವಂತ ಸೃಷ್ಟಿಗಳು. ಅವನು 'ಪ್ರಜೆಗಳ ನಿಜವಾದ ತಂದೆಯಂತಿರುವ ರಾಜ'ನೆಂದು ಕರೆಯಿಸಿಕೊಳ್ಳಲು ತುಂಬಾ ಇಷ್ಟಪಟ್ಟ ಹಾಗೆ ಕಾಣುತ್ತದೆ.

ಹೀಗೆ ಹಾಮೂರಾಬಿ ಶಾಸನ ಎನ್ನಿಸಿಕೊಳ್ಳುವ ಅವನ ಶಾಸನದ ಎಲ್ಲ ಸೂತ್ರಗಳೂ ಅವನಿಂದಲೇ ಪ್ರಪ್ರಥಮವಾಗಿ ಸೃಷ್ಟಿಗೊಂಡವು ಎನ್ನುವಂತಿಲ್ಲ. ಹಾಗೆ ನೋಡಿದರೆ ಯಾವ ಶಾಸನವೂ ಯಾವ ಧರ್ಮಶಾಸ್ತ್ರವೂ ಸಂಹಿತೆಯೂ ಪೂರ್ಣವಾಗಿ ಒಬ್ಬನ ಬುದ್ಧಿ ಮತ್ತು ಅನುಭವದಿಂದ ಬರುವುದಿಲ್ಲ. ಹಾಮೂರಾಬಿಯದೂ ಹಾಗೆಯೇ.

ಅವನ ಪ್ರಕಾರ ರಾಜನು ನ್ಯಾಯರಕ್ಷಕನು. ಶಾಸನದ ಉಪೋದ್ಘಾತದಲ್ಲಿ ಹೇಳಿದ ಹಾಗೆ ಬೆಬಿಲೋನಿನ ರಕ್ಷಕ ದೇವತೆಯ

ಆಜ್ಞೆಯ ಮೇರೆಗೆ ಹಾಮೂರಾಬಿ ನ್ಯಾಯರಕ್ಷಣೆಯ ಹೊರೆ ಹೊತ್ತಿದ್ದಾನೆ. ಶಿಷ್ಟರನ್ನು ಕಾಪಾಡುವುದೂ ದುಷ್ಟರನ್ನು ಶಿಕ್ಷಿಸುವುದೂ ಅವನ ಕೆಲಸ. ಈ ಕಾರ್ಯಭಾರವನ್ನು ಒಪ್ಪಿಕೊಂಡ ಅವನು ಅದನ್ನು ಅತಿ ಶ್ರದ್ಧೆಯಿಂದ ಮಾಡಿದ್ದಾನೆ. ಈ ಶ್ರದ್ಧೆಯ ದ್ಯೋತಕವಾಗಿ ಬಂದವುಗಳೇ ಅವನ ನ್ಯಾಯಸೂತ್ರಗಳು. ಆದೇ ಆಗ ಸುವ್ಯವಸ್ಥಿತವಾಗುತ್ತಿದ್ದ ಸಮಾಜವೊಂದಕ್ಕೆ ಬೇಕಾದ ಪ್ರಾಯಶಃ ಎಲ್ಲ ಮಾನವ ಸಂಬಂಧಗಳ ಬಗೆಗೂ ಹಾಮೂರಾಬಿ ನಿಯಮಗಳನ್ನು ರೂಪಿಸಿದ್ದಾನೆ ಎಂದರೆ ತಪ್ಪಲ್ಲ. ಅವನ ಸೂತ್ರಗಳಲ್ಲಿ ದೇವರ ಪ್ರಸ್ತಾಪ ಬಂದಿದ್ದರೂ ಒಟ್ಟಿನಲ್ಲಿ ಅವನದು ಧಾರ್ಮಿಕ ಶಾಸನವಲ್ಲ; ಅದು ಲೌಕಿಕ ಶಾಸನ. ರಾಜಕೀಯ ಸಂಬಂಧಗಳು, ಆರ್ಥಿಕ ಮತ್ತು ನಾಗರಿಕ ಸಂಬಂಧಗಳು, ಕೌಟುಂಬಿಕ ಹೊಣೆಗಾರಿಕೆಗಳು, ಸಾಮಾಜಿಕ ತಾರತಮ್ಯಗಳು, ಶಿಷ್ಟಾಚಾರಗಳು ಎಲ್ಲವೂ ಶಾಸನದಲ್ಲಿವೆ. ನ್ಯಾಯಸೂತ್ರಗಳಲ್ಲಿ ಹೆಚ್ಚಿನವು ದಿನನಿತ್ಯದ ಜೀವನ ಕೊಡು-ಕೊಳ್ಳುವಿಕೆಗೆ ಸಂಬಂಧಿಸಿವೆ. ಕೆಲವು ಅನಾಗರಿಕವೆನ್ನಿಸುವಷ್ಟು ಕ್ರೂರವಾದವು. ಪ್ರತೀಕಾರ ನ್ಯಾಯವನ್ನು ಪುರಸ್ಕರಿಸುವ ಸೂತ್ರಗಳಿಗೆ ಕಡಿಮೆಯಿಲ್ಲ. ಹಾಮೂರಾಬಿ ವರ್ಗಗಳ ತಾರತಮ್ಯವನ್ನೂ ಒಪ್ಪಿದ್ದಾನೆ. ಹೀಗಿದ್ದರೂ ನಾವು ನೆನಪಿಡಬೇಕಾದ ಒಂದು ವಿಷಯವೆಂದರೆ ಹಾಮೂರಾಬಿ ಈ ಸೂತ್ರಗಳನ್ನು ಇಪ್ಪತ್ತನೆಯ ಶತಮಾನದಲ್ಲಿ ನಿರ್ಮಿಸಲಿಲ್ಲ. ನಾಲ್ಕು ಸಾವಿರ ವರ್ಷಗಳ ಹಿಂದೆ ಅನಾಗರಿಕತೆಯ ಕತ್ತಲಿನಿಂದ ಆದೇ ಆಗ ನಾಗರಿಕತೆಯ ಬೆಳಕಿನೆಡೆಗೆ ಹೊರಬರುತ್ತಿದ್ದ ಸಮಾಜವೊಂದಕ್ಕಾಗಿ ಅವನು ಈ ನಿಯಮಗಳನ್ನು ಕೊಟ್ಟನು. ಅವನದು ನಡೆದ ನೆಲವಲ್ಲ; ನಾಗರಿಕತೆಯ ಮೊದಲ ಹೆಜ್ಜೆಗಳಷ್ಟೇ ಆಗ ಮೂಡಿದ್ದವು.

ಅಧ್ಯಾಯ ೪

ಪ್ರತೀಕಾರ ನ್ಯಾಯ

ಹಾಮೂರಾಬಿಯು ಕೊಟ್ಟ ನ್ಯಾಯಸೂತ್ರಗಳನ್ನು ಪರಿಶೀಲಿಸಿದಾಗ ನಿಚ್ಚಳವಾಗಿ ಕಂಡುಬರುವ ಅಂಶವೊಂದಿದೆ. ತಪ್ಪಿರಲಿ, ಒಪ್ಪಿರಲಿ – ಹಾಮೂರಾಬಿಯ ನ್ಯಾಯವು ''ಪ್ರತೀಕಾರನ್ಯಾಯ'' ಅಥವಾ ''ಮುಯ್ಯಿಗೆ ಮುಯ್ಯಿ'' ಎಂಬ ತತ್ವವನ್ನು ಒಪ್ಪಿಕೊಂಡು ಬಿಟ್ಟಿದೆ. ಈ ತತ್ವದ ಪ್ರಕಾರ ವ್ಯಕ್ತಿಯು ತಾನು ಮಾಡಿದ ಅಪರಾಧಕ್ಕೆ ಸರಿಯಾದ ಶಿಕ್ಷೆಯನ್ನು ಅನುಭವಿಸಬೇಕು. ತಪ್ಪುಗಾರನ ವಿರುದ್ಧ ಪ್ರತೀಕಾರ ಮಾಡುವ ಅಧಿಕಾರ ನಿರಪರಾಧಿಗೆ ಸರಕಾರದಿಂದ – ಅಂದರೆ ರಾಜನಿಂದ ದೊರೆಯಬೇಕು. ಮುಯ್ಯಿಗೆ ತಕ್ಕ ಮುಯ್ಯಿ. 'ಕಣ್ಣಿಗೊಂದು ಕಣ್ಣು' 'ಹಲ್ಲಿಗೊಂದು ಹಲ್ಲು'. ಅರ್ಥಾತ್ ಒಬ್ಬನು ಇನ್ನೊಬ್ಬನ ಕಣ್ಣು ಕಿತ್ತಿದ್ದರೆ, ಅಥವಾ ಹಲ್ಲು ಮುರಿದಿದ್ದರೆ ಅಂಥ ಅಪರಾಧಿಗೆ ಅದೇ ರೀತಿಯ ಶಿಕ್ಷೆಯನ್ನು ಕೊಡುವುದು ನ್ಯಾಯ. ಇದು ಜಗತ್ತಿನ ವಿವಿಧ ಭಾಗಗಳಲ್ಲಿ ವಾಸಿಸುತ್ತಿದ್ದ ಬುಡಕಟ್ಟುಗಳಲ್ಲಿ ಅತಿ ಪ್ರಾಚೀನ ಕಾಲದಿಂದಲೂ ಕಂಡುಬರುತ್ತಿದ್ದ ನ್ಯಾಯತತ್ವ. ಈಗಲೂ ಬಹುತೇಕ ಬುಡಕಟ್ಟುಗಳು ಪಾಲಿಸುವ ನ್ಯಾಯತತ್ವ. ಹಾಗೆ ನೋಡಿವರೆ ಹಾಮೂರಾಬಿ ಪ್ರತೀಕಾರ ನ್ಯಾಯತತ್ವವನ್ನು ಹೊಸವಾಗಿ ಹುಡುಕಿ

ತೆಗೆದವನಲ್ಲ. ಅವನಿಗಿಂತ ಮೊದಲೇ ಬೆಬಿಲೋನಿನ ಸುತ್ತಮುತ್ತ ವಾಸಿಸುತ್ತಿದ್ದ ಬುಡಕಟ್ಟುಗಳ ಜನ ಆ ತತ್ವವನ್ನು ಪಾಲಿಸುತ್ತಿದ್ದರು. ಹಾಮೂರಾಬಿ ಅದನ್ನು ರಾಜನಿಗೆ ಒಪ್ಪಿತವಾದ ನ್ಯಾಯತತ್ವವೆಂದು ಸಾರಿ ಆ ತತ್ವಕ್ಕೆ ಅನುಗುಣವಾದ ಕೆಲವು ನಿಯಮಗಳನ್ನು ರೂಪಿಸಿದ. ಅವುಗಳನ್ನು ವ್ಯಾಪಕವಾಗಿ ಪ್ರಚಾರಮಾಡಿದ. ಕರಿಗಲ್ಲಿನ ಕಂಬದ ಮೇಲೆ ಬರೆಯಿಸಿದ.

ಇಂಥ ಕೆಲವು ಪ್ರಾವಧಾನಗಳನ್ನು ನೋಡೋಣ. ಒಂದು ಮನೆಯನ್ನು ಕಟ್ಟುವಾಗ ಕಟ್ಟಿದ ಆ ಮನೆ ಬಿದ್ದು ಮನೆಯೊಡೆಯನು ಸತ್ತರೆ, ಅಂಥ ದೋಷಪೂರ್ಣವಾದ ಮನೆಯನ್ನು ಕಟ್ಟಿದ ಶಿಲ್ಪಿಯ ಮಗನೇ ಸಾಯಬೇಕು. ಆಗ ಮಗನನ್ನು ಕಳೆದುಕೊಳ್ಳುವ ಒಡೆಯನಿಗೆ ನ್ಯಾಯ ಒದಗಿದಂತೆ ಎಂದು ಹಾಮೂರಾಬಿ ನ್ಯಾಯ ಹೇಳುತ್ತದೆ. ಶಿಲ್ಪಿಗೆ ತನ್ನ ಕೆಲಸವನ್ನು ಅಲಕ್ಷ್ಯ ಮಾಡಿ ಒಬ್ಬನನ್ನು ಸಾಯಿಸುವ ಹಕ್ಕಿಲ್ಲ. ಅಂಥ ತಪ್ಪುಮಾಡಿದ್ದಕ್ಕೆ ಸಮನಾದ ಶಿಕ್ಷೆ ಅವನಿಗೆ ಆಗಲೇಬೇಕು ಎಂದು ಬೆಬಿಲೋನಿನ ಜನ ಅಪೇಕ್ಷಿಸುತ್ತಿದ್ದರೆಂದು ಕಾಣುತ್ತದೆ. ಅದನ್ನು ಮನ್ನಿಸಿ ಇಂಥ ನಿಯಮವನ್ನು ರೂಪಿಸಲಾಯಿತು.

ಹಾಮೂರಾಬಿಯ ಕಾಲದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಶಸ್ತ್ರಚಿಕಿತ್ಸೆ ಬಳಕೆಯಾಗುತ್ತಿತ್ತು. ಆದರೆ ಕೆಲವರು ತಾವು ಪರಿಣಿತ ಶಸ್ತ್ರಚಿಕಿತ್ಸಕರೆಂದು ಹೇಳಿಕೊಂಡು ಜನರನ್ನು ಮೋಸಗೊಳಿಸುತ್ತಿದ್ದ ಹಾಗೆ ಕಾಣುತ್ತದೆ. ಇದನ್ನು ತಡೆಯಲು ಹಾಮೂರಾಬಿ ನ್ಯಾಯಸೂತ್ರದಲ್ಲಿ ಒಂದು ನಿಯಮವಿದೆ. ಶಸ್ತ್ರಚಿಕಿತ್ಸೆ ಮಾಡುವ ವೈದ್ಯನ ತಪ್ಪಿನಿಂದಾಗಿ ರೋಗಿ ಸತ್ತರೆ ತಪ್ಪುಮಾಡಿದ ವೈದ್ಯನ ಬೆರಳನ್ನು ಕತ್ತರಿಸಬೇಕೆಂದು ನ್ಯಾಯಸೂತ್ರ ಹೇಳುತ್ತದೆ. ನಾಲ್ಕು ಸಾವಿರ ವರ್ಷಗಳ ಮೇಲೆ ಹೆಚ್ಚುಕಡಿಮೆ ಇಂಥದೇ ಮಾತನ್ನು ಈಗ ಜನ ಹೇಳುತ್ತಿದ್ದಾರೆ, ಬಳಕೆದಾರರ ಹಿತರಕ್ಷಣೆ ಕಾನೂನಿನ ಅಡ್ಡಿ ಇಂಥ ವೈದ್ಯರಿಗೆ ಕಠಿಣತಮ ಶಿಕ್ಷೆ ವಿಧಿಸಬೇಕೆಂಬ ಕೂಗು ಎದ್ದಿರುವುದನ್ನು ನೋಡಿದರೆ

ಹಾಮೂರಾಬಿಯ ನ್ಯಾಯಸೂತ್ರಗಳು ಅನಾಗರಿಕರಿಗೆ ಸೀಮಿತವಾದ ಸೂತ್ರಗಳಲ್ಲ ಎಂಬ ಸತ್ಯ ಗೋಚರಿಸುತ್ತದೆ.

ಅದೇ ರೀತಿಯಲ್ಲಿ ದಾಯಿಯೊಬ್ಬಳು ಮೊಲೆಯೂಡಿಸುವ ಶಿಶುಗಳನ್ನು ಅದಲು ಬದಲು ಮಾಡಿದರೆ ಆ ದಾಯಿಯ ಮೊಲೆಗಳನ್ನು ಕತ್ತರಿಸುವುದು ಸೂಕ್ತ. ಮೋಸಮಾಡುವ ವ್ಯಾಪಾರಿಯ ಐಶ್ವರ್ಯ ವ್ಯಾಪಾರ ಎಲ್ಲವನ್ನೂ ಸರಕಾರ ವಶಪಡಿಸಿಕೊಳ್ಳುವುದು ಯೋಗ್ಯ. ಒಟ್ಟಿನಲ್ಲಿ ಇದು ಪ್ರತೀಕಾರ ನ್ಯಾಯ. ತಪ್ಪಿಗೆ ಸಮನಾದ ಮತ್ತು ಸದೃಶವಾದ ಪ್ರತೀಕಾರ ಅಥವಾ ಶಿಕ್ಷೆ ಕೊಡಬೇಕೆಂಬುದು ಇದರ ಸಾರಾಂಶ. ರಾಜನ ಕರ್ತವ್ಯವೆಂದರೆ ನಿರಪರಾಧಿಯನ್ನು ರಕ್ಷಿಸುವುದು ಹಾಗೂ ತಪ್ಪು ಮಾಡಿದ ಅಪರಾಧಿಯನ್ನು ಪ್ರತೀಕಾರ ನ್ಯಾಯದಂತೆ ಶಿಕ್ಷಿಸುವುದು.

ಪ್ರತೀಕಾರ ನ್ಯಾಯವು ಹೆಚ್ಚು ಸಂವೇದನಾಶೀಲರಾದ ನಮಗೆ ಇಂದು ಬರ್ಬರವೆಂದು ಅನ್ನಿಸಬಹುದು. ಹೌದು, ನಾವೀಗ ಹಲವು ರೀತಿಯಲ್ಲಿ ನಮ್ಮ ಪೂರ್ವಜರಿಗಿಂತ ಸಂವೇದನಾಶೀಲರೂ ಉದಾರಿಗಳೂ ಆಗಿದ್ದೇವೆ. ಆದರೆ ನಮ್ಮ ಮನಸ್ಸಿನ ಮೂಲೆಯಲ್ಲಿ ನಮಗೆ ತಪ್ಪು ಮಾಡಿದವನ ವಿರುದ್ಧ ಕಠಿಣತಮ ಶಿಕ್ಷೆ ಆಗಬೇಕೆಂಬ ಅದಮ್ಯ ಬಯಕೆ ಆಗೀಗ ಹುಟ್ಟಿಕೊಳ್ಳುವುದಿಲ್ಲವೆ? ನಿರಪರಾಧಿಗೆ ಕಿರುಕುಳ ಕೊಡುವವರಿಗೆ ತಕ್ಕ ಶಾಸ್ತಿ ಆಗಲೇಬೇಕು ಎಂದು ಅನ್ನಿಸುವುದಿಲ್ಲವೆ? ಕೆಲವು ಮುಸ್ಲಿಂ ದೇಶಗಳಲ್ಲಿ ಈಗಲೂ ಬರ್ಬರ ದೈಹಿಕ ದಂಡನೆಗಳು, ಕೈ ಕತ್ತರಿಸುವುದು, ಬೆರಳು ಕತ್ತರಿಸುವುದು, ಕಣ್ಣು ಕೀಳಿಸುವುದು ಶಾಸನಬದ್ಧವಾಗಿಲ್ಲವೆ? ನಾಲ್ಕು ಸಾವಿರ ವರ್ಷಗಳಷ್ಟು ಹಿಂದೆ ರಾಜ್ಯಾಡಳಿತ ಮಾಡುತ್ತಿದ್ದ ಈ ದೊರೆಗೆ ಅಂಥ ಶಿಕ್ಷೆಗಳ ಅವಶ್ಯಕತೆ ಕಂಡಿದ್ದರೆ ನಾವು ಆಶ್ಚರ್ಯಪಡಬೇಕಾಗಿಲ್ಲ.

ಇನ್ನೊಂದು ವಿಷಯವನ್ನು ಕೂಡ ನಾವು ಗಮನಿಸಬಹುದು. ಕಣ್ಣಿಗೊಂದು ಕಣ್ಣು, ಹಲ್ಲಿಗೊಂದು ಹಲ್ಲು ಎಂಬ ನಿಯಮದಲ್ಲಿ

ಶಿಕ್ಷೆಯ ಮಿತಿಯನ್ನೂ ಹೇಳಿದೆ. ಕಣ್ಣಿಗೊಂದು ಕಣ್ಣು ಕೇಳಿ; ಹಲ್ಲಿಗೊಂದು ಹಲ್ಲು ಕೇಳಿ; ಅಷ್ಟು ಮಾತ್ರ ಕೇಳಿ; ಅದಕ್ಕಿಂತ ಹೆಚ್ಚು ಕೇಳುವುದು ನ್ಯಾಯವಲ್ಲ ಎಂಬುದೇ ಪ್ರತೀಕಾರ ನ್ಯಾಯದ ಮಿತಿ. ಅದರಿಂದ ಸಾಮೂಹಿಕ ಪ್ರತೀಕಾರ, ಪಂಗಡಗಳ ಒಳಜಗಳ, ದ್ವೇಷಸಾಧನೆ ಇವೆಲ್ಲ ನಿಲ್ಲುತ್ತವೆ ಎಂದು ರಾಜನಾದ ಹಾಮೂರಾಬಿ ಸರಿಯಾಗಿ ಗ್ರಹಿಸಿದ್ದಾನೆ.

ಇನ್ನೊಮ್ಮೆ ಒಂದು ಮಾತನ್ನು ಒತ್ತಿ ಹೇಳಬೇಕು. ಇಂದು ಪ್ರತೀಕಾರ ನ್ಯಾಯ ನಮಗೆ ಬರ್ಬರವೆನ್ನಿಸುತ್ತದೆ. ಇದು ಸಹಜ. ಏಕೆಂದರೆ ಹಾಮೂರಾಬಿಯ ಶಾಸನದ ನಂತರ ಸುಮಾರು ೪೦೦೦ ವರ್ಷಗಳ ಅವಧಿಯಲ್ಲಿ ಮನುಷ್ಯ ಮೃಗವು ಮಾನವನಾಗಲು ನಿರಂತರ ಹೋರಾಟ ನಡೆಸಿದೆ. ಆ ಮೃಗ ಹಿಂದಿಗಿಂತ ಹೆಚ್ಚು ಸಂವೇದನಾ ಶೀಲವಾಗಿದೆ, ಉದಾರವಾಗಿದೆ. ಹೀಗಿದ್ದರೂ ಮನಸ್ಸಿನ ಯಾವುದೋ ಮೂಲೆಯಲ್ಲಿ ಪ್ರತೀಕಾರದ ಸುಪ್ತಬಯಕೆ ಹೊಗೆಯಾಡುತ್ತಿರುವುದು ಸತ್ಯಸಂಗತಿ. ನಮ್ಮ ವಿರುದ್ಧ, ನಮ್ಮ ಪ್ರೀತಿಯ ಜನರ ವಿರುದ್ಧ ತಪ್ಪುಮಾಡಿದವರಿಗೆ ಹಗೆ ಸಾಧಿಸಲು ಹೊಂಚು ನಡೆದಿರುತ್ತದೆ. ಇದನ್ನು ಗ್ರಹಿಸಿ ಚಾಣಾಕ್ಷ ರಾಜ ಹಾಮೂರಾಬಿ ನಿಯಮಬದ್ಧವಾಗಿಸಲು, ನಿಯಂತ್ರಣಕ್ಕೆ ಒಳಪಡಿಸಲು ಕೆಲವು ಸೂತ್ರಗಳನ್ನು ರೂಪಿಸಿದ ಅಷ್ಟೆ !

ಅಧ್ಯಾಯ ೫

ತಾರತಮ್ಯ ತತ್ವ

ನ್ಯಾಯ ಸೂತ್ರಗಳಲ್ಲಿ ಹೇಳಿದ ಪ್ರತೀಕಾರ ನ್ಯಾಯವು ಎಲ್ಲ ವರ್ಗಗಳಿಗೂ ಏಕಪ್ರಕಾರವಾಗಿ ಅನ್ವಯವಾಗುವುದಿಲ್ಲ. ಹಾಮೂರಾಬಿಯ ಕಾಲಕ್ಕೆ ಬೆಬಿಲೋನಿಯದ ಸಮಾಜವು ಮೂರು ವರ್ಗಗಳಾಗಿ ಘನೀಕರಿಸಿತ್ತು. ಇವುಗಳಲ್ಲಿ ಮೊದಲನೆಯದು ಶ್ರೀಮಂತ ಕುಲಸ್ಥರ "ಆಮೇಲು" ಎಂದು ಕರೆಯಿಸಿಕೊಳ್ಳುವ ವರ್ಗ. ಎರಡನೆಯದು ಸಾಮಾನ್ಯ ಜನರ "ಮುಷ್ಕೆನು" ಎಂಬ ವರ್ಗ. ಕೊನೆಯದು ಗುಲಾಮರಿಂದ ಕೂಡಿದ "ಆರ್ದು" ವರ್ಗ. ಈ ವರ್ಗ ತಾರತಮ್ಯಗಳಿಗೆ ಅನುಗುಣವಾಗಿ ತಪ್ಪಿತಸ್ಥರಿಗೆ ವಿಧಿಸುತ್ತಿದ್ದ ಶಿಕ್ಷೆಗಳು ಹೆಚ್ಚುಕಡಿಮೆ ಯಾಗುತ್ತಿದ್ದವು. ಉದಾಹರಣೆಗೆ, ಆಮೇಲು ವರ್ಗದ ಒಬ್ಬನ ಕಣ್ಣು ಕಿತ್ತಿದ್ದರೆ ಹಾಗೆ ಕಣ್ಣುಕಿತ್ತವನ ಕಣ್ಣುಕೀಳುವುದು ಸಮನಾದ ಶಿಕ್ಷೆ. ಇದು ಮುಯ್ಯಿಗೆ ಮುಯ್ಯಿ. ಮುಷ್ಕೆನು ವರ್ಗದ ಒಬ್ಬನ ಕಣ್ಣು ಹೋಗಿದ್ದರೆ ತಪ್ಪಿತಸ್ಥನ ಕಣ್ಣುಕೀಳಬೇಕಾಗಿಲ್ಲ. ಅಂಥ ತಪ್ಪಿಗೆ ಅರವತ್ತು ಬೆಳ್ಳಿಯ ಶಕೆಲ್ ನಾಣ್ಯಗಳನ್ನು ಕೊಡಬೇಕಾಗುತ್ತಿತ್ತು. ಮುಷ್ಕೆನು ಎರಡನೆಯ ವರ್ಗದವನು. ಅವನ ವಿರುದ್ಧ ಎಸಗಿದ ಅಪರಾಧಕ್ಕೆ ಕಡಿಮೆ ಶಿಕ್ಷೆ ಎಂಬ ತತ್ವ ಇಲ್ಲಿ ಅಡಕವಾಗಿದೆ. ಗುಲಾಮನ ಕಣ್ಣು ಹೋಗಿದ್ದರೆ, ಕೇವಲ

ಮೂವತ್ತು ಬೆಳ್ಳಿಯ ಶಕೆಲ್ ದಂಡ ಹೇರಲಾಗುವುದು. ಅಂದರೆ ಗುಲಾಮನ ಕಣ್ಣಿನ ಬೆಲೆ ಮುಷ್ಕೆನುವಿನ ಕಣ್ಣಿನ ಬೆಲೆಯ ಅರ್ಧದಷ್ಟು ಎಂದು ತಿಳಿಯಲಾಗುತ್ತಿತ್ತು.

ಅದೇ ರೀತಿ ಸಾಮಾನ್ಯ ಗೃಹಸ್ಥನೊಬ್ಬನು ಇನ್ನೊಬ್ಬ ಸಾಮಾನ್ಯನಿಗೆ ಹೊಡೆದರೆ ಆ ತಪ್ಪಿಗೆ ವಿಧಿಸುವ ದಂಡ ಹತ್ತು ಶಕೆಲ್. ಆದರೆ ಒಬ್ಬ ಕುಲಸ್ಥನು ಇನ್ನೊಬ್ಬ ಕುಲಸ್ಥನನ್ನು ಹೊಡೆದರೆ ಆ ತಪ್ಪಿಗೆ ದಂಡ ಅರವತ್ತು ಶಕೆಲ್‌ಗಳು. ಹೀಗೆ ಅಪರಾಧಿಯ ಹಾಗೂ ಪೀಡಿತನ ಅಂತಸ್ತಿಗೆ ತಕ್ಕ ಶಿಕ್ಷೆಯಾಗುತ್ತಿತ್ತು.

ಅದೇ ರೀತಿ ಅಪರಾಧಗಳಲ್ಲಿಯೂ ತಾರತಮ್ಯವಿದೆ. ಸಣ್ಣ ತಪ್ಪುಗಳಿಗೆ ಹಗುರವಾದ ದಂಡನೆಗಳನ್ನು ವಿಧಿಸಲಾಗುತ್ತಿತ್ತು. ಕೆಲವು ಮಹಾಪರಾಧಗಳಿವೆ; ಅವುಗಳಿಗೆ ಮರಣ ದಂಡನೆಯನ್ನು ವಿಧಿಸಲಾಗುತ್ತಿತ್ತು. ಮರಣದಂಡನೆಗೆ ಯೋಗ್ಯವಾದ ಕೆಲವು ಅಪರಾಧಗಳೆಂದರೆ ಇವು: ಬಲಾತ್ಕಾರದ ಸಂಯೋಗ, ತಾಯಿ–ಮಗ ಅಥವಾ ತಂದೆ–ಮಗಳ ಅನೈತಿಕ ಸಂಬಂಧ, ಗಂಡುಮಗುವನ್ನು ಕದ್ದೊಯ್ಯುವುದು, ಗುಲಾಮರಿಗೆ ಆಶ್ರಯಕೊಡುವುದು, ಬೆಂಕಿ ಹೊತ್ತಿದ ಮನೆಯಿಂದ ವಸ್ತು ಒಡವೆಗಳನ್ನು ಅಪಹರಿಸುವುದು, ಮಾಟಮಂತ್ರ ಮಾಡುವುದು, ಮದ್ಯದ ಅಳತೆಯನ್ನು ಮೋಸಮಾಡುವುದು, ಪರಸ್ತ್ರೀ ಗಮನ, ಪರಪುರುಷರ ಸಹವಾಸ, ಕನ್ನಹಾಕುವುದು, ಬೇರೊಬ್ಬನನ್ನು ಮದುವೆಯಾಗುವ ಉದ್ದೇಶದಿಂದ ಗಂಡನನ್ನು ಕೊಲ್ಲುವ ಪ್ರಯತ್ನ ಮಾಡುವುದು, ಯುದ್ಧದಲ್ಲಿ ಓಡಿಹೋಗುವುದು, ಸನ್ಯಾಸಿಯೊಬ್ಬಳು ಮದ್ಯ ಕುಡಿಯುವುದು ಅಥವಾ ಮದ್ಯದಂಗಡಿ ಪ್ರವೇಶ ಮಾಡುವುದು – ಇತ್ಯಾದಿ.

ಹಾಮೂರಾಬಿ ಜೀವಿಸಿದ್ದ ಕಾಲದ ಲಕ್ಷಣವನ್ನು ಈ ಅಪರಾಧಗಳ ಪಟ್ಟಿ ಚೆನ್ನಾಗಿ ತೋರಿಸುತ್ತದೆ. ಗುಲಾಮರು ಶ್ರೀಮಂತ ಕುಟುಂಬಗಳ ಬೆಲೆಬಾಳುವ ಆಸ್ತಿಯೆಂದು ತಿಳಿಯುತ್ತಿದ್ದ ಕಾಲದಲ್ಲಿ, ಗುಲಾಮರನ್ನು

ಓಡಿಸಿಕೊಂಡು ಹೋಗುವುದು ಅಥವಾ ಓಡಿಬಂದ ಗುಲಾಮರಿಗೆ ಆಶ್ರಯಕೊಡುವುದು ಮಹಾಪರಾಧವೆಂದು ಆಗಿನ ಸಮಾಜ ತಿಳಿಯುತ್ತಿದ್ದರೆ ಆಶ್ಚರ್ಯವಿಲ್ಲ. ಬೆಂಕಿಹೊತ್ತಿದಾಗ ಸಂರಕ್ಷಣೆಯ ಉಪಾಯಗಳಿಲ್ಲದ ಆ ಕಾಲದಲ್ಲಿ ಜನರು ನಿಸ್ಸಹಾಯಕರಾದಾಗ ಬೆಂಕಿಬಿದ್ದ ಮನೆಯಲ್ಲಿನ ವಸ್ತು ಒಡವೆಗಳನ್ನು ಅಪಹರಿಸಿಕೊಂಡು ಹೋಗುವುದು ಸಂಕಟದ ದುರುಪಯೋಗ ಎಂದು ಜನ ತಿಳಿಯುತ್ತಿದ್ದರು. ಇಂಥ ಸಂದರ್ಭದಲ್ಲಿ ಅತಿ ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವಾಗಿತ್ತು. ಕುಟುಂಬದೊಳಗಿನ ಅನೈತಿಕ ಸಂಬಂಧಗಳನ್ನು ಹತ್ತಿಕ್ಕಿದರೆ ಮಾತ್ರ ಕುಟುಂಬ ಗಟ್ಟಿಯಾಗಿರಲು ಸಾಧ್ಯ ಎಂಬ ವಿವೇಕವನ್ನು ನ್ಯಾಯಸೂತ್ರಗಳು ಒಪ್ಪಿಕೊಂಡಿವೆ. ಮದ್ಯದ ಅಳತೆಯಲ್ಲಿ ಮೋಸಮಾಡಿದರೆ ಮರಣದಂಡನೆ ವಿಧಿಸುವುದು ಅಥವಾ ಸನ್ಯಾಸಿನಿಯೊಬ್ಬಳು ಮದ್ಯ ಕುಡಿದರೆ ಮರಣದಂಡನೆ ವಿಧಿಸುವುದು ಈಗಿನವರಿಗೆ ವಿಚಿತ್ರವಾಗಿ ಕಂಡರೂ ಹಾಮೂರಾಬಿಯ ಕಾಲದ ಲಕ್ಷಣಗಳನ್ನು ಚೆನ್ನಾಗಿ ಅರಿತವರಿಗೆ ಈ ಎಲ್ಲ ಶಿಕ್ಷೆಗಳು ಹಾಸ್ಯಾಸ್ಪದವೆನ್ನಿಸುವುದಿಲ್ಲ. ಹಾಮೂರಾಬಿ ವಿಧಿಸಿದ ದಂಡನೆಗಳನ್ನು ನೋಡಿ ನಗುವ ಮುಂಚೆ ನಾವು ನಮ್ಮ ಧರ್ಮಶಾಸ್ತ್ರಕಾರನಾದ ಮನುವು ಹೇಳಿದ ಪಾತಕಗಳು, ಉಪಪಾತಕಗಳು, ಮಹಾಪಾತಕಗಳನ್ನೂ ವರ್ಣಗಳಿಗೆ ಅನುಗುಣವಾಗಿ ವಿಧಿಸುವ ದಂಡನೆಗಳನ್ನೂ ನೆನಪಿಡಬೇಕು.

ಪ್ರತೀಕಾರ ನ್ಯಾಯ ಮತ್ತು ವರ್ಗತಾರತಮ್ಯ ತತ್ವಗಳಿಗೆ ಸಂಬಂಧಿಸಿದ ಕೆಲವು ನ್ಯಾಯಸೂತ್ರಗಳನ್ನು ಇಲ್ಲಿ ಸಂಗ್ರಹಿಸಿ ಹೇಳೋಣ:

ಸೂತ್ರ ೧೯೬: ಯಾವನಾದರೊಬ್ಬನು ಉತ್ತಮ ಕುಲಸ್ಥನೊಬ್ಬನ ಕಣ್ಣು ಕಳೆಯುವಂತೆ ಮಾಡಿದ್ದರೆ, ಹಾಗೆ ಮಾಡಿದವನ ಕಣ್ಣು ಕಳೆಯುವಂತೆ ಮಾಡಬೇಕು.

ಸೂತ್ರ ೧೯೭: ಆ ಅಪರಾಧಿಯು ಉತ್ತಮ ಕುಲಸ್ಥನ ಅಂಗವನ್ನು ಭಗ್ನಗೊಳಿಸಿದ್ದರೆ, ಅವನ ಅಂಗವನ್ನೇ ಭಗ್ನಗೊಳಿಸಬೇಕು.

ಸೂತ್ರ ೧೯೮: ಆ ಅಪರಾಧಿಯು ಒಬ್ಬ ಸಾಮಾನ್ಯ ಪ್ರಜೆಯ ಕಣ್ಣು ಕಳೆಯುವಂತೆ ಮಾಡಿದ್ದರೆ ಅಥವಾ ಸಾಮಾನ್ಯ ಪ್ರಜೆಯ ಅಂಗವನ್ನು ಭಗ್ನಗೊಳಿಸಿದ್ದರೆ, ಒಂದು ಬೆಳ್ಳಿಯ ಮಿನಾ ನಾಣ್ಯವನ್ನು ದಂಡವಾಗಿ ಕೊಡಬೇಕು.

ಸೂತ್ರ ೧೯೯: ಉತ್ತಮ ಕುಲಸ್ಥನೊಬ್ಬನು ತನ್ನಂಥವನೇ ಆದ ಇನ್ನೊಬ್ಬ ಕುಲೀನನನ್ನು ಹೊಡೆದಿದ್ದರೆ ಹೊಡೆದವನು ಒಂದು ಬೆಳ್ಳಿಯ ಮಿನಾ ನಾಣ್ಯವನ್ನು ಕೊಡುವುದು.

ಸೂತ್ರ ೨೦೦: ಅವನು ಸಾಮಾನ್ಯ ಪ್ರಜೆಯೊಬ್ಬನ ಹಲ್ಲು ಉದುರುವಂತೆ ಮಾಡಿದ್ದರೆ ಬೆಳ್ಳಿ ಮಿನಾ ನಾಣ್ಯದ ಮೂರರಲ್ಲೊಂದು ಭಾಗವನ್ನು ಕೊಡಲಿ.

ಸೂತ್ರ ೨೦೨: ತನಗಿಂತ ಮೇಲಿನ ಕುಲದವರ ಮರ್ಮಸ್ಥಾನಕ್ಕೆ ಯಾವನಾದರೂ ಹೊಡೆದಿದ್ದರೆ, ಅಂಥವನಿಗೆ ಜನರೆದುರು ನಿಲ್ಲಿಸಿ ಆಕಳಿನ ಚರ್ಮದಿಂದ ಮಾಡಿದ ಚಾಟಿಯಿಂದ ಅರವತ್ತು ಹೊಡೆತಗಳನ್ನು ಹೊಡೆಯಬೇಕು.

ಸೂತ್ರ ೨೦೪: ಬಡವನು ಇನ್ನೊಬ್ಬ ಬಡವನಿಗೆ ಹೊಡೆದರೆ, ಹಾಗೆ ಹೊಡೆದವನು ಹತ್ತು ಬೆಳ್ಳಿಯ ಶಕೆಲ್‌ಗಳನ್ನು ಕೊಡುವುದು.

ಸೂತ್ರ ೨೦೫: ಶ್ರೀಮಂತನ ಗುಲಾಮನಾಗಿರುವ ಆಳೊಬ್ಬನು ಸ್ವತಂತ್ರ ಪ್ರಜೆಯೊಬ್ಬನನ್ನು ಹೊಡೆದಿದ್ದರೆ, ಅಂಥವನ ಕಿವಿಯನ್ನು ಕೊಯ್ಯಬೇಕು.

ಸೂತ್ರ ೨೦೯: ಯಾವನಾದರೊಬ್ಬನು ಸ್ವತಂತ್ರ ಪ್ರಜೆಯ ಮಗಳನ್ನು ಹೊಡೆದು ಅವಳ ಗರ್ಭದಲ್ಲಿರುವುದನ್ನು ಬೀಳಿಸಿದರೆ, ಅಂಥವನ್ನು ಆ ಗರ್ಭಕ್ಕಾಗಿ ಹತ್ತು ಚಿನ್ನದ ಶಕೆಲ್‌ಗಳನ್ನು ಕೊಡುವುದು.

ಸೂತ್ರ ೨೧೦: ಆ ಹೆಣ್ಣುಮಗಳು ಒಂದು ವೇಳೆ ಸತ್ತರೆ, ಕೊಂದವನ ಮಗಳನ್ನು ಮರಣಕ್ಕೆ ಗುರಿಪಡಿಸಬೇಕು.

ಸೂತ್ರ ೨೧೩: ಅವನು ಒಬ್ಬ ಕೆಲಸಗಿತ್ತಿಯನ್ನು ಹೊಡೆದು, ಅವಳ ಗರ್ಭದಲ್ಲಿರುವುದನ್ನು ಬೀಳಿಸಿದರೆ, ಆಗ ಎರಡು ಬೆಳ್ಳಿಯ ಶಕೆಲ್‌ಗಳನ್ನು ದಂಡವಾಗಿ ಕೊಡುವುದು.

ಸೂತ್ರ ೨೧೪: ಒಬ್ಬ ವೈದ್ಯನು ಸದ್ಗೃಹಸ್ಥನೊಬ್ಬನ ತೀವ್ರಗಾಯಗಳನ್ನು ಲೋಹದ ಈಟಿಯ ಸಹಾಯದಿಂದ ಗುಣಪಡಿಸಿದ್ದರೆ, ಗಾಯವನ್ನು ತೆರೆದು ಗುಣಪಡಿಸಿದ್ದರೆ ಅಂಥ ವೈದ್ಯನು ಹತ್ತು ಬೆಳ್ಳಿಯ ಶಕೆಲ್‌ಗಳನ್ನು ಶುಲ್ಕವಾಗಿ ತೆಗೆದುಕೊಳ್ಳಲಿ.

ಸೂತ್ರ ೨೧೬: ರೋಗಿಯು ಬಡವನ ಮಗನಾಗಿದ್ದರೆ, ವೈದ್ಯನು ಐದು ಬೆಳ್ಳಿಯ ಶಕೆಲ್‌ಗಳನ್ನು ತೆಗೆದುಕೊಳ್ಳಲಿ.

ಸೂತ್ರ ೨೧೭: ಆ ವೈದ್ಯನು ಚಿಕಿತ್ಸೆ ಮಾಡುವಾಗ ಆ ಸದ್ಗೃಹಸ್ಥನ ಸಾವಿಗೆ ಕಾರಣನಾದರೆ, ಅಥವಾ ಕಣ್ಣು ಕಳೆದುಕೊಳ್ಳುವಂತೆ ಮಾಡಿದರೆ, ವೈದ್ಯನ ಕೈಗಳನ್ನೇ ಕಡಿಯಬೇಕು.

ಸೂತ್ರ ೨೧೮: ಆ ವೈದ್ಯನು ಬಡವನೊಬ್ಬನ ಗುಲಾಮನನ್ನು ಕಂಚಿನ ಈಟಿಯಿಂದ ಚಿಕಿತ್ಸೆ ಮಾಡುವಾಗ ಗುಲಾಮನು ಸತ್ತರೆ, ಬಡವನು ಕಳೆದುಕೊಂಡ ಗುಲಾಮನ ಬದಲಿಗೆ ಬೇರೊಬ್ಬ ಗುಲಾಮನನ್ನು ಕೊಡುವುದು.

ಅಧ್ಯಾಯ ೬

ಕುಟುಂಬ ಮತ್ತು ವಿವಾಹ

ಹಾಮೂರಾಬಿ ಶಾಸನದಲ್ಲಿ ಕುಟುಂಬ, ವಿವಾಹ, ವಿವಾಹ ವಿಚ್ಛೇದನ, ತಂದೆ-ಮಕ್ಕಳ ಸಂಬಂಧ, ಮಕ್ಕಳ ಆಸ್ತಿ, ಪರಪುರುಷ ಸಂಪರ್ಕ ಮಾಡಿದ ಸ್ತ್ರೀಗೆ ಶಿಕ್ಷೆ, ವಿಧವೆಗೆ ರಕ್ಷಣೆ ಮುಂತಾದ ಕುಟುಂಬಕ್ಕೆ ಸಂಬಂಧಿಸಿದ ಅನೇಕ ನ್ಯಾಯಸೂತ್ರಗಳಿವೆ. ಇದನ್ನು ನೋಡಿದರೆ ಆತ ಕುಟುಂಬದ ಬಗ್ಗೆ ಬಹಳ ನಿಗಾವಹಿಸಿದ್ದ ಎಂಬ ಮಾತು ನಿಚ್ಚಳವಾಗುತ್ತದೆ. ಕುಟುಂಬವು ಗಟ್ಟಿಯಾಗಿ ಇದ್ದರೆ ದೇಶದಲ್ಲಿ ಸುಖ ನೆಲೆಸುತ್ತದೆ ಎಂಬ ಮಾತನ್ನು ಅವನ ಶಾಸನ ಪದೇಪದೇ ಒತ್ತಿಹೇಳುತ್ತದೆ. ಅದು ಗಟ್ಟಿಮುಟ್ಟಾಗಿರಲು ಏನೇನು ಬೇಕೋ ಅದನ್ನೆಲ್ಲ ರಾಜಶಾಸನ ಮಾಡಬೇಕೆಂಬುದು ಅವನ ಅಭಿಮತ. ಹೀಗಾಗಿಯೇ ಕುಟುಂಬ ವ್ಯವಸ್ಥೆಯ ಬಗ್ಗೆ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಈ ಸೂತ್ರಗಳು ಬಂದಿವೆ.

ಅವನ ಶಾಸನದಂತೆ ಎಲ್ಲ ವಿವಾಹಗಳೂ ಶಾಸನಬದ್ಧವಾಗಿರಬೇಕು. ಅವನ್ನು ಬೇಕೆಂದಾಗ ಮುರಿಯಲು ಬರುವುದಿಲ್ಲ. ಆದರೆ ಅದು ಹಿಂದೂಗಳಲ್ಲಿರುವಂತೆ ಮುರಿಯಲಾರದ ಪವಿತ್ರ ಸಂಸ್ಕಾರವಾಗಿರಲಿಲ್ಲ. ವಿವಾಹ ವಿಚ್ಛೇದನಕ್ಕೆ ಆಸ್ಪದವುಂಟು; ಅದಕ್ಕೆ ಕಾನೂನಿನ

ಮನ್ನಣೆಯುಂಟು. ಗಂಡ ಬಿಟ್ಟ ಹೆಣ್ಣಿಗೆ ಅನ್ನ ಬಟ್ಟೆ ಅಥವಾ ಜೀವನಾಂಶ ಕೊಡಬೇಕೆಂದು ಹಾಮೂರಾಬಿ ಶಾಸನ ಹೇಳುತ್ತದೆ. ಅಷ್ಟೇ ಅಲ್ಲ, ಮಕ್ಕಳನ್ನು ಹೆತ್ತ ತಾಯಿಗೆ ವಿವಾಹ ವಿಚ್ಛೇದನವಾದರೆ, ಅವಳು ಮದುವೆಯ ಸಮಯದಲ್ಲಿ ಗಂಡನ ಮನೆಯವರಿಗೆ ಕೊಟ್ಟ ವರದಕ್ಷಿಣೆಯನ್ನು ಅವಳಿಗೆ ಮರಳಿ ಕೊಡಬೇಕು, ಅಲ್ಲದೆ ಮಕ್ಕಳ ಪಾಲನೆ ಪೋಷಣೆಗೆಂದು ಗಂಡನ ಕುಟುಂಬದ ಆಸ್ತಿಯಲ್ಲಿ ಒಂದು ಚಿಕ್ಕ ಪಾಲನ್ನು ಕೂಡ ಅವಳಿಗೆ ಕೊಡಬೇಕೆಂದು ನ್ಯಾಯಸೂತ್ರ ಹೇಳುತ್ತದೆ.

ಹೆಣ್ಣಿನ ಬಗ್ಗೆ ಇಷ್ಟು ಸಹಾನುಭೂತಿಯನ್ನು ತೋರಿಸುವ ಹಾಮೂರಾಬಿ ಗಯ್ಯಾಳಿ ಹೆಂಡತಿಯ ವಿರುದ್ಧ ಅತಿ ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕೆಂದು ಹೇಳಿದ್ದಾನೆ. ಬೇಕಾಬಿಟ್ಟಿಯಾಗಿ ಮನೆಯಿಂದ ಹೊರಹೋಗುವ ಚಾಳಿ ಇರುವ ಹೆಣ್ಣುಗಳನ್ನು ಹಾಗೂ ಗಂಡನನ್ನು ಅವಹೇಳನ ಮಾಡುವ ಚಾಳಿ ಇರುವ ಹೆಣ್ಣನ್ನು ನೀರಿಗೆ ನೂಕಿ ಎಂದು ಹಾಮೂರಾಬಿ ಹೇಳಿದ್ದಾನೆ. ಆದರೆ ಗಂಡನೇ ರಸಿಕಶಿಖಾಮಣಿ ಇದ್ದು ಹೊರಚಾಳಿಗೆ ಬಿದ್ದಿದ್ದರೆ ಅಂಥ ಗಂಡನನ್ನು ಹೆಂಡತಿ ಹೀಯಾಳಿಸಿದರೆ ಅವಳಿಗೆ ಶಿಕ್ಷೆಯಿಲ್ಲ. ತಾನು ಕೊಟ್ಟ ವರದಕ್ಷಿಣೆಯನ್ನು ಗಂಡನ ಮನೆಯಿಂದ ಪಡೆದುಕೊಂಡು ಆಕೆ ತನ್ನ ತಂದೆಯ ಮನೆಗೆ ಹೋಗಬಹುದು ಎನ್ನುತ್ತಾನೆ ಹಾಮೂರಾಬಿ.

ಕುಟುಂಬ, ವಿವಾಹ, ವಿವಾಹ ವಿಚ್ಛೇದನಗಳ ಬಗೆಗೆ ಇರುವ ಕೆಲವು ನ್ಯಾಯಸೂತ್ರಗಳನ್ನು ಇಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಮೂಲದ ಶೈಲಿಯನ್ನೇ ಅನುಸರಿಸಿ ಸಂಗ್ರಹಿಸಿ ಕೊಟ್ಟಿದ್ದೇನೆ.

ಸೂತ್ರ ೧೨೮: ಗಂಡನೊಬ್ಬನು ಒಬ್ಬಾಕೆಯನ್ನು ಹೆಂಡತಿಯೆಂದು ಸ್ವೀಕರಿಸಿದ ನಂತರವೂ ಮದುವೆಯ ಕರಾರುಪತ್ರವನ್ನು ಮಾಡಿರದಿದ್ದರೆ, ಆ ಹೆಂಗಸು ಅವನ ಹೆಂಡತಿಯಲ್ಲ.

ಸೂತ್ರ ೧೨೯: ಒಬ್ಬಾತನ ಹೆಂಡತಿಯಾದವಳು ಪರಪುರುಷನೊಬ್ಬನ ಸಂಪರ್ಕದಲ್ಲಿರುವಾಗ ಸಿಕ್ಕಿಬಿದ್ದರೆ, ಅವರಿಬ್ಬರನ್ನೂ ಕಟ್ಟಿಹಾಕಿ

ಕೊಂದುಹಾಕಿ ನೀರಿಗೆ ಬಿಸಾಡಬಹುದು. ಆದರೆ ಆ ಗಂಡನು ತನ್ನ ಹೆಂಡತಿಯನ್ನು ಉಳಿಸಿಕೊಂಡರೆ, ರಾಜನು ತನ್ನ ಸೇವಕನನ್ನು (ಆ ಹೆಂಗಸಿನ ಪ್ರೇಮಿಯನ್ನು) ಬದುಕಲು ಬಿಡಬಹುದು.

ಸೂತ್ರ ೧೩೧: ತನ್ನ ಪತ್ನಿಯ ಶೀಲದ ಬಗ್ಗೆ ಯಾವನೊಬ್ಬ ಪತಿಯು ದೂರಿಟ್ಟಾಗ, ಅವಳು ಪರಪುರುಷನೊಡನೆ ಸಂಪರ್ಕದಲ್ಲಿರುವುದು ಸಿದ್ಧವಾಗದಿದ್ದರೆ, ಆ ಪತ್ನಿಯು ತನ್ನ ನಿರಪರಾಧವ ಬಗ್ಗೆ ಆಣೆ ಇಟ್ಟು ಹೇಳಲಿ ಹಾಗೂ ತನ್ನ ಮನೆಗೆ ತೆರಳಲಿ.

ಸೂತ್ರ ೧೩೬: ಒಬ್ಬ ಪತಿಯು ತನ್ನ ನಗರವನ್ನು ಬಿಟ್ಟು ಬೇರೆ ಕಡೆಗೆ ಓಡಿ ಹೋದುದನ್ನು ನೋಡಿ, ಅವನ ಪತ್ನಿಯು ಪರಪುರುಷನೊಬ್ಬನ ಮನೆಯನ್ನು ಸೇರಿದರೆ, ಓಡಿ ಹೋಗಿದ್ದ ಪತಿಯು ಮರಳಿ ಬಂದು ತನ್ನ ಪತ್ನಿಯನ್ನು ತನ್ನೊಡನೆ ಬರುವಂತೆ ಬಲಾತ್ಕರಿಸಲಾರ. ಆ ಓಡಿಹೋದವನು ತನ್ನ ನಗರವನ್ನು ದ್ವೇಷಿಸಿದ್ದಾನೆಂದು ತಿಳಿಯಬೇಕು. ಆದುದರಿಂದ ಅವನ ಪತ್ನಿಯು ಅವನನ್ನು ಸೇರಬೇಕಾಗಿಲ್ಲ.

ಸೂತ್ರ ೧೩೮: ತನಗಾಗಿ ಮಕ್ಕಳನ್ನು ಹಡೆಯದ ಬಂಜೆಯಾದ ಪತ್ನಿಯಿಂದ ವಿವಾಹ ವಿಚ್ಛೇದನವನ್ನು ಬಯಸುವ ಪತಿಯು, ವಧು ಶುಲ್ಕವೆಂದು ಕೊಡುವಷ್ಟು ಹಣವನ್ನೂ ಅವಳು ತನ್ನ ತಂದೆಯ ಮನೆಯಿಂದ ತಂದ ವಿವಾಹ–ಭಾಗವನ್ನೂ ಅವಳಿಗೆ ಕೊಟ್ಟು ವಿವಾಹ ವಿಚ್ಛೇದನವನ್ನು ಪಡೆಯಲಿ.

ಸೂತ್ರ ೧೪೧: ತನ್ನ ಗಂಡನ ಮನೆಯಲ್ಲಿರುವ ಪತ್ನಿಯೊಬ್ಬಳು ಹೊರಹೋಗಲು ಒತ್ತಾಯಪಡಿಸುತ್ತಿದ್ದರೆ, ಮೂರ್ಖಳಂತೆ ವರ್ತಿಸಿದರೆ, ಮನೆಯ ಒಡವೆ ವಸ್ತುಗಳನ್ನು ಪೋಲುಮಾಡಿದರೆ, ಗಂಡನನ್ನು ಅನಾದರಿಸಿ ನೋಡಿದರೆ, ಅವಳ ಗಂಡನು ಅವಳ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಲಿ. ಒಂದು ವೇಳೆ ಅವಳ ಗಂಡನು ಅವಳಿಂದ ವಿವಾಹ ವಿಚ್ಛೇದನವನ್ನು ಬಯಸುವುದಾದರೆ, ಅವಳು ಬೇಕಾದಲ್ಲಿಗೆ

ಹೊರಟುಹೋಗಬಹುದು. ಆಗ ಗಂಡನು ಅವಳಿಗೆ ಯಾವ ವಿವಾಹ ವಿಚ್ಛೇದನಾ ಶುಲ್ಕವನ್ನೂ ಕೊಡಬೇಕಾಗಿಲ್ಲ. ಒಂದು ವೇಳೆ ಈ ವಿವಾಹ ವಿಚ್ಛೇದನವನ್ನು ಗಂಡನು ಒಪ್ಪದಿದ್ದರೆ ಆಗ ಆ ಹೆಂಡತಿಯು ಮನೆಯಲ್ಲೇ ಗುಲಾಮಳಂತೆ ಇರಬೇಕು. ಗಂಡನು ಎರಡನೆಯ ಮದುವೆಯನ್ನು ಮಾಡಿಕೊಳ್ಳಬಹುದು.

ಸೂತ್ರ ೧೪೨: ಪತ್ನಿಯೊಬ್ಬಳು ತನ್ನ ಗಂಡನನ್ನು ದ್ವೇಷಿಸುತ್ತ ಅವನ ಸಹವಾಸದಿಂದ ದೂರವಿರಲು ಇಚ್ಛಿಸುವುದಾದರೆ, ಅವಳ ಪೂರ್ವೇತಿಹಾಸವನ್ನು ವಿಚಾರಿಸಿ ಅವಳ ಕೊರತೆಯೇನೆಂದು ತಿಳಿದುಕೊಳ್ಳಬೇಕು. ಅವಳು ಯುಕ್ತಾಯುಕ್ತ ವಿವೇಚನೆಯುಳ್ಳವಳಾಗಿದ್ದರೆ, ದುರ್ಗುಣಿಯಾಗಿರದಿದ್ದರೆ, ಅವಳ ಗಂಡನು ಅವಳನ್ನು ಬಿಟ್ಟು ಹೊರಹೋಗಿದ್ದರೆ ಹಾಗೂ ಹೀನಾಯವಾಗಿ ನಡೆಸಿಕೊಂಡಿದ್ದರೆ, ಅವಳು ತಪ್ಪುಗಾರಳಲ್ಲ. ಅಂಥವಳು ತನ್ನ ವಿವಾಹಭಾಗವನ್ನು ತೆಗೆದುಕೊಂಡು ತನ್ನ ತಂದೆಯ ಮನೆಗೆ ಹೋಗಬಹುದು.

ಸೂತ್ರ ೧೪೩: ಅವಳು ಅಂಥ ಯುಕ್ತಾಯುಕ್ತ ವಿವೇಚನೆ ಇಲ್ಲದವಳಾದರೆ, ಹೊರಹೋಗುವ ಸ್ವಭಾವದವಳಾದರೆ, ತನ್ನ ಮನೆಯನ್ನು ಹಾಳುಗೆಡವಿದ್ದರೆ, ಗಂಡನನ್ನು ಹೀನಾಯವಾಗಿ ನಡೆಸಿಕೊಂಡಿದ್ದರೆ, ಅಂಥವಳನ್ನು ನೀರಿನಲ್ಲಿ ಮುಳುಗಿಸಬೇಕು.

ಸೂತ್ರ ೧೪೮: ಪತ್ನಿಯು ವಿವಾಹದ ನಂತರ ರೋಗಗ್ರಸ್ತಳಾದಾಗ, ಗಂಡನು ಬೇರೊಬ್ಬಳನ್ನು ವಿವಾಹವಾಗಲು ಇಚ್ಛಿಸಿದರೆ ಅವನು ಹಾಗೆ ಮಾಡಲಿ, ಆದರೆ ಅವನು ತನ್ನ ರೋಗಗ್ರಸ್ತಳಾದ ಪತ್ನಿಯ ವಿವಾಹ ವಿಚ್ಛೇದನ ಮಾಡಲಾಗದು. ಅವಳು ತಾನು ಕಟ್ಟಿದ ಆ ಸಂಸಾರದಲ್ಲೇ ಇರಲಿ ಮತ್ತು ಅವನು ಅವಳನ್ನು ಅಜೀವಪರ್ಯಂತ ಸಲಹಲಿ.

ಸೂತ್ರ ೧೪೯: ಆ ಪತ್ನಿಯು ಹಾಗೆ ತನ್ನ ಗಂಡನ ಮನೆಯಲ್ಲಿ ಇರಲು ಬಯಸುವುದಿಲ್ಲವಾದರೆ, ಗಂಡನು ಅವಳು ತನ್ನ ತಂದೆಯ

ಮನೆಯಿಂದ ತಂದ ವಿವಾಹ-ಭಾಗವನ್ನು ಕೊಡಲಿ ಹಾಗೂ ಅವಳು ಮನೆಬಿಟ್ಟು ಹೋಗುವುದನ್ನು ಸಮ್ಮತಿಸಲಿ.

ಸೂತ್ರ ೧೬೮: ತಂದೆಯು ತನ್ನ ಮಗನ ಉತ್ತರಾಧಿಕಾರವನ್ನು ತಪ್ಪಿಸಲು ನಿರ್ಧರಿಸಿದ್ದೇ ಆದರೆ, ಹಾಗೂ ನ್ಯಾಯಧೀಶರ ಎದುರಿಗೆ ತಾನು ತನ್ನ ಮಗನ ಸಂಬಂಧ ಕಡಿದುಕೊಳ್ಳುವೆನೆಂದು ಹೇಳಿದರೆ, ನ್ಯಾಯಾಧೀಶನು ಆ ಮಗನ ಪೂರ್ವ ವೃತ್ತಾಂತವನ್ನು ವಿಚಾರಿಸಬೇಕು. ಒಂದು ವೇಳೆ ಅವನ ಅಪರಾಧವು ತಂದೆ ಮಕ್ಕಳ ಸಂಬಂಧವನ್ನು ಕಳೆದುಕೊಳ್ಳುವಷ್ಟು ಗಂಭೀರವಿರದಿದ್ದರೆ ತಂದೆಯು ಮಗನ ಉತ್ತರಾಧಿಕಾರವನ್ನು ತಪ್ಪಿಸಲಾರನು.

ಸೂತ್ರ ೧೬೯: ಒಂದೊಮ್ಮೆ ಮಗನು ತನ್ನ ತಂದೆಯ ವಿರುದ್ಧ ಅಂಥ ಅಪರಾಧವನ್ನು ಎಸಗಿದ್ದೇ ನಿಜವಿದ್ದರೆ, ತಂದೆಯು ಮಗನ ತಪ್ಪನ್ನು ಮೊದಲಬಾರಿಗೆ ಮನ್ನಿಸಲಿ, ಆದರೆ ಎರಡನೆಯ ಸಲವೂ ಮಗನು ಅಂಥ ಅಪರಾಧವನ್ನು ಮಾಡಿದರೆ ತಂದೆಯು ತನ್ನ ಮಗನ ಪುತ್ರತ್ವದ ಅಧಿಕಾರವನ್ನು ಸಮಾಪ್ತಿಗೊಳಿಸಲಿ.

ಸೂತ್ರ ೧೭೭: ಚಿಕ್ಕಮಕ್ಕಳಿರುವ ವಿಧವೆಯೊಬ್ಬಳು ಮತ್ತೊಮ್ಮೆ ವಿವಾಹವಾಗಲು ನಿರ್ಧರಿಸಿದರೆ, ಅವಳು ನ್ಯಾಯಾಧೀಶನ ಸಮ್ಮತಿ ಯಿಲ್ಲದೆ ವಿವಾಹವಾಗಲಾರಳು. ನ್ಯಾಯಾಧೀಶನು ಅವಳಿಗೆ ಅನುಮತಿ ಕೊಡುವ ಮೊದಲು ಆ ವಿಧವೆಯ ಮೃತನಾದ ಪತಿಯು ಬಿಟ್ಟುಹೋದ ಆಸ್ತಿಪಾಸ್ತಿಯ ಬಗ್ಗೆ ವಿಚಾರಿಸಲಿ ಹಾಗೂ ಉಳಿದಿರುವಷ್ಟು ಆಸ್ತಿಯನ್ನು ವಿಧವೆ ಹಾಗೂ ಎರಡನೆಯ ಪತಿಯ ವಶಕ್ಕೆ ಕೊಡಿಸಲಿ. ಆ ಆಸ್ತಿಪಾಸ್ತಿಗಳ ವಿವರಗಳನ್ನು ನಮೂದಿಸಲಿ. ಅವರಿಬ್ಬರೂ ಆಸ್ತಿಯನ್ನು ಜೋಪಾನವಾಗಿಡಬೇಕು ಹಾಗೂ ಮಕ್ಕಳ ಪಾಲನೆ ಪೋಷಣೆ ಮಾಡಬೇಕು. ಆಸ್ತಿಗೆ ಸೇರಿದ ಒಂದೇ ಒಂದು ಪಾತ್ರೆಯನ್ನು ಕೂಡ ಮಾರಬಾರದು. ಆ ವಿಧವೆಯ ಮಕ್ಕಳಿಗೆ ಸೇರಿದ ಪಾತ್ರೆಗಳನ್ನು ಕೊಳ್ಳುವವನು ತನ್ನ ಹಣವನ್ನು ಕಳೆದುಕೊಳ್ಳುವನು. ಅವನು ತಾನು

ತೆಗೆದುಕೊಂಡ ಪಾತ್ರೆಗಳನ್ನೆಲ್ಲ ಅವುಗಳ ಒಡೆಯರಿಗೆ ಒಪ್ಪಿಸಬೇಕಾಗುವುದು.

ಗಂಡ-ಹೆಂಡಂದಿರ ಸಂಬಂಧದ ಬಗ್ಗೆ ಹಾಮೂರಾಬಿ ತುಂಬಾ ನಿಷ್ಠುರದ ಧೋರಣೆ ಹೊಂದಿದ್ದ. ವಿವಾಹಬಾಹಿರ ಪ್ರೇಮದ ಪ್ರಕರಣ ಬೆಳಕಿಗೆ ಬಂದಕೂಡಲೇ ಅಂಥ ಗಯ್ಯಾಳಿ ಹೆಂಗಸು ಮತ್ತು ಪ್ರೇಮಿಯನ್ನು ನೀರಿನಲ್ಲಿ ಮುಳುಗಿಸಿಬಿಡಬೇಕು; ಆಕೆಯ ಗಂಡ ಒಂದು ವೇಳೆ ಸಹಜ ಕರುಣೆಯಿಂದ ಅವಳನ್ನು ಜೀವಂತ ಉಳಿಸಿಕೊಳ್ಳಲು ಬಯಸಿದರೆ ಅವಳನ್ನು ಹೆಚ್ಚುಕಡಿಮೆ ನಗ್ನಳನ್ನಾಗಿ ಮಾಡಿ ಬೀದಿಯಲ್ಲಿ ಬಿಟ್ಟುಬಿಡಬೇಕೆಂದು ಒಂದು ನ್ಯಾಯಸೂತ್ರ ಹೇಳುತ್ತದೆ. ಈ ವಿಷಯದಲ್ಲಿ ಅವನು ರೋಮನ್ ದೊರೆ ಸೀಸರನಿಗೂ ಒಂದು ಹೆಜ್ಜೆ ಮುಂದಿದ್ದಾನೆ. ಯಾವ ವಿವಾಹಿತ ಹೆಂಗಸಿನ ಬಗೆಗೂ ಸಂಶಯದಿಂದ ಬೆರಳು ತೋರಿಸುವಂತಿರಬಾರದು. ಲೋಕಾಪವಾದವನ್ನು ಸಹಿಸುವುದಕ್ಕಿಂತ ಆಕೆ ನೀರಿನಲ್ಲಿ ಮುಳುಗಿ ಸಾಯುವುದು ಮೇಲು ಎಂದು ಶಾಸನ ಹೇಳುತ್ತದೆ.

ಹಾಮೂರಾಬಿಯ ಕಾಲ ಮತ್ತು ಶಾಸನಗಳು ಪುರುಷ ಪಕ್ಷಪಾತಿಯಾಗಿದ್ದವು ಎಂಬ ಬಗ್ಗೆ ಸಂಶಯವಿಲ್ಲ. ಅದು ಯುಗಧರ್ಮವೂ ಹೌದು; ಹಾಮೂರಾಬಿಯ ವ್ಯಕ್ತಿಗತ ವಿಚಾರವೂ ಹೌದು ಎಂದು ಕಾಣುತ್ತದೆ. ವಿವಾಹ ಮುರುಗಡೆಯ ಬಗ್ಗೆ ಇತರ ಅನೇಕರಂತೆ ಅವನು ಹೆಣ್ಣಿಗೊಂದು ಕಾಯ್ದೆ, ಗಂಡಿಗೊಂದು ಕಾಯ್ದೆ ಎಂದು ತಿಳಿದುಕೊಂಡಂತೆ ಕಾಣುತ್ತದೆ. ಮಕ್ಕಳಾಗದ ಹೆಣ್ಣನ್ನು, ಪ್ರೇಮಿಗಳನ್ನು ಹೊಂದಿರುವ ಹೆಣ್ಣನ್ನು, ಗಂಡನೊಡನೆ ಅನ್ಯೋನ್ಯವಾಗಿ ಬಾಳಲಾರದ ಹೆಣ್ಣನ್ನು, ಗೃಹಕೃತ್ಯವನ್ನು ಸರಿಯಾಗಿ ನಿಭಾಯಿಸಲಾರದ ಹೆಣ್ಣನ್ನು, ಗಂಡನು ಸುಲಭವಾಗಿ ಬಿಟ್ಟುಬಿಡಬಹುದಾಗಿತ್ತು. ಅವಳು ವಿವಾಹದ ಹೊತ್ತಿನಲ್ಲಿ ಗಂಡಿನ ಮನೆಯವರಿಗೆ ಕೊಟ್ಟ ವಿವಾಹ-ಭಾಗವನ್ನು ಅವಳಿಗೆ ಹಿಂದಿರುಗಿಸಿ 'ನೀನು ನನ್ನ

ಹೆಂಡತಿಯಲ್ಲ' ಎಂದರಾಯಿತು. ಆದರೆ ಆಕೆ ತನ್ನ ಗಂಡನಿಗೆ 'ನೀನು ನನ್ನ ಗಂಡನಲ್ಲ' ಎನ್ನುವಂತಿಲ್ಲ. ಹಾಗೆ ಹೇಳಿದರೆ ಆಕೆಯನ್ನು ನೀರಿನಲ್ಲಿ ಮುಳುಗಿಸಬೇಕು ಎಂದು ಹಾಮೂರಾಬಿ ಶಾಸನ ಹೇಳುತ್ತದೆ. ಹಾಗೆಯೇ ಮನೆಯಿಂದ ಪದೇ ಪದೇ ಹೊರಹೋಗುವ ಹೆಂಡತಿಯನ್ನು ಮತ್ತು ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದವಳನ್ನು ಎಂದಿನಂತೆ "ನೀರಿನಲ್ಲಿ ಮುಳುಗಿಸಿ ಸಾಯಿಸಬಹುದು."

ಇದು ಅವನ ಶಾಸನದ ನಿರ್ಣಯ ಒಕ್ಕಣಿಕೆ ಇರಬಹುದು. ಆದರೆ ಆಚರಣೆಯಲ್ಲಿ ಅವಳನ್ನು ನೀರಿನಲ್ಲಿ ಮುಳುಗಿಸುವುದೂ ವಿವಾಹ ಮುರುಗಡೆ ಮಾಡುವುದೂ ಸುಲಭ ಮಾತಾಗಿರಲಿಲ್ಲ. ಗಂಡ ಕ್ರೂರಿಯಾಗಿದ್ದರೆ ಅಥವಾ ಹೆಣ್ಣು ನಿಜವಾಗಿ ಒಳ್ಳೆಯ ನಡತೆಯುವಳಾಗಿದ್ದರೆ ಶಿಕ್ಷೆಯ ಭಯವಿಲ್ಲ. ಅವಳು ತನ್ನ ವಿವಾಹ-ಭಾಗವನ್ನು ತೆಗೆದುಕೊಂಡು ತವರು ಮನೆಗೆ ಹೋಗುವುದಕ್ಕೂ ಅವಕಾಶವಿದೆ. ಗಂಡನು ಹೆಂಡತಿಯ ರಕ್ಷಕನೆಂಬ ತತ್ವವನ್ನು ಒಪ್ಪಿಕೊಂಡಿರುವುದರಿಂದ ಹೆಂಡತಿಯು ಅವನ ಹದ್ದುಬಸ್ತಿನಲ್ಲಿ ಇರಬೇಕೆಂದು ಆಗಿನ ಸಮಾಜ ಮತ್ತು ಆಗಿನ ಶಾಸನ ಬಯಸುತ್ತಿತ್ತು. ವ್ಯಾಪಾರ ವಾಣಿಜ್ಯಕ್ಕೆಂದು ಅಥವಾ ಯುದ್ಧಕ್ಕೆಂದು ಹೊರಗೆ ಹೋದ ಗಂಡನು ದೀರ್ಘಕಾಲ ಕುಟುಂಬಕ್ಕೆ ಮರಳದೇ ಇದ್ದರೆ, ಆತ ಹೆಂಡತಿ ಮಕ್ಕಳ ಜೀವನ ನಿರ್ವಹಣೆಗೆ ಬೇಕಾದ ವ್ಯವಸ್ಥೆ ಮಾಡದೇ ಹೋಗಿದ್ದರೆ, ಹೆಣ್ಣು ಇನ್ನೊಬ್ಬನನ್ನು ಕೂಡಿಕೊಂಡಿರಬಹುದು. ಒಂದು ವೇಳೆ ಹೊರಗೆ ಹೋದ ಗಂಡನು ಮರಳಿದರೆ, ಅವಳು ಮತ್ತೆ ಆ ಗಂಡನನ್ನು ಕೂಡಿಕೊಳ್ಳಬಹುದೆಂದು ಕಾಯ್ದೆ ಹೇಳುತ್ತದೆ.

ಕುಟುಂಬ, ವಿವಾಹ, ಗಂಡಿನ ಅಧಿಕಾರ, ಹೆಣ್ಣಿನ ಅಧೀನ ಸ್ಥಾನಮಾನ ಮುಂತಾದ ವಿಷಯಗಳಲ್ಲಿ ಹಾಮೂರಾಬಿಯ ವಿಚಾರಗಳು ಭಾರತದ ಮನುವಿಗಿಂತ ಅಷ್ಟೇನೂ ಭಿನ್ನವಾಗಿಲ್ಲ ಎಂಬುದನ್ನು

ಕಾಣಬಹುದು. ಮನು ಧರ್ಮದ ಹೆಸರಿನಲ್ಲಿ ಪ್ರಮಾಣಮಾಡಿದರೆ, ಹಾಮೂರಾಬಿ ಲೌಕಿಕ ವ್ಯಾವಹಾರಿಕ ಕಾರಣಗಳನ್ನು ಮುಂದೆ ಮಾಡಿ ಇಂಥ ಕಾಯ್ದೆಗಳನ್ನು ಘೋಷಿಸಿದ್ದಾನೆ. ಹೆಂಡತಿಯು ತನ್ನ ವಿವಾಹ-ಭಾಗವನ್ನು ತೆಗೆದುಕೊಂಡು ಹೋಗಬಹುದೆಂಬ ಅಧಿಕಾರವಾಗಲಿ, ಮಕ್ಕಳ ಪಾಲನೆ-ಪೋಷಣೆಗೆಂದು ಕುಟುಂಬದ ಆಸ್ತಿಯ ಒಂದು ಚಿಕ್ಕಭಾಗವನ್ನು ಪಡೆಯುವ ಅಧಿಕಾರವಾಗಲಿ ಇತರ ನಾಗರಿಕತೆಗಳಲ್ಲಿಯೂ ಇರಲಿಲ್ಲ. ಮನುವು ಪ್ರಸ್ತಾಪ ಮಾಡುವ ಸ್ತ್ರೀಧನವೂ ಕೂಡ ಸ್ತ್ರೀಗೆ ಪರಿಮಿತ ಹಕ್ಕನ್ನು ಕೊಟ್ಟಿತ್ತು. ಅಷ್ಟೇ ಏಕೆ, ಈ ಹಕ್ಕು ಹತ್ತೊಂಬತ್ತನೇ ಶತಮಾನದವರೆಗೂ ಇಂಗ್ಲೆಂಡಿನ ಸ್ತ್ರೀಯರಿಗೂ ಇದ್ದಿಲ್ಲ. ಇದನ್ನೆಲ್ಲ ನೋಡಿದರೆ ಹಾಮೂರಾಬಿಯ ಶಾಸನ ನಾವು ತಿಳಿದುಕೊಂಡಷ್ಟು ಸ್ತ್ರೀ ವಿರೋಧಿ ಇರಲಿಲ್ಲ ಎನ್ನಬಹುದೇನೊ!

ಅಧ್ಯಾಯ ೭

ರಾಜ್ಯವೆಂದರೆ ನ್ಯಾಯಶಾಸನ

ನ್ಯಾಯದ ವ್ಯಾಖ್ಯೆ ಏನೇ ಇರಲಿ ರಾಜ್ಯ, ರಾಜ, ರಾಜ್ಯಾಧಿಕಾರ, ಸರಕಾರ ಇವೆಲ್ಲವುಗಳ ಆಧಾರವೆಂದರೆ ನ್ಯಾಯಶಾಸನ ಎಂದು ಹಾಮೂರಾಬಿ ಸರಿಯಾಗಿ ಗ್ರಹಿಸಿದ್ದ. ನ್ಯಾಯವಿಲ್ಲದೆ ರಾಜ್ಯವೂ ಇಲ್ಲ, ರಾಜ್ಯಾಧಿಕಾರವೂ ಇಲ್ಲ. ಪ್ರಜೆಗಳಿಗೆ ಸರಿಯಾದ ನ್ಯಾಯವನ್ನು ಒದಗಿಸುವುದು ರಾಜನ ಕರ್ತವ್ಯ. ಇದನ್ನು ತನ್ನ ಕರಿಗಲ್ಲಿನ ಶಾಸನದ ನ್ಯಾಯಸೂತ್ರಗಳ ಕೆಳಗೆ ಉಪಸಂಹಾರದಲ್ಲಿ ಹಾಮೂರಾಬಿ ಹೇಳಿದ ಮಾತುಗಳಿಂದ ತಿಳಿಯಬಹುದು: "ಬಲವಂತನು ಬಲಹೀನನನ್ನು ತುಳಿಯದಂತೆ, ಅನಾಥರಿಗೂ ವಿಧವೆಯರಿಗೂ ನ್ಯಾಯವು ಸಿಗುವಂತೆ, ನಾನು ನನ್ನ ಜ್ಞಾನದ ಬಲದಿಂದ ಅವರನ್ನು ಸದಾ ನಿಯಂತ್ರಿಸಿದ್ದೇನೆ. ದುಃಖಿತರು ಯಾರಾದರೂ ಇದ್ದರೆ ನ್ಯಾಯದೇವತೆಯಾದ ನನ್ನ ಪ್ರತಿಮೆಯ ಇದಿರು ಬರಲಿ, ಈ ನನ್ನ ಶಿಲಾಶಾಸನದಲ್ಲಿ ಬರೆದುದನ್ನು ಓದಲಿ." ರಾಜನು 'ನ್ಯಾಯದೇವತೆ' ಎಂದು ರಾಜ್ಯ ಮತ್ತು ನ್ಯಾಯವನ್ನು ಸಮೀಕರಿಸುತ್ತಾನೆ ಆತ. ಪ್ರಜೆಗಳು ಶಾಸನದಲ್ಲಿ ಇದ್ದುದನ್ನು ರಾಜಾರೋಪವಾಗಿ, ನೇರವಾಗಿ ಕೇಳಲಿ ಎಂಬುದು ಅವನ ಅಭಿಪ್ರಾಯ.

ಹಾಮೂರಾಬಿ ಆಡಳಿತದ ಕಾಲದಲ್ಲಿ ಸಾಮಾನ್ಯವಾಗಿ ಪುರೋಹಿತರೇ ದಾಖಲೆ ಬರೆಯುತ್ತಿದ್ದರು. ಅರ್ಜಿ ಬರೆಯುವ ಲೇಖಕರೂ ಇದ್ದರು. ವಾದಿಯೇ ಸ್ವತಃ ಬರೆಯುತ್ತಿದ್ದುದೂ ಉಂಟು. ಆದರೆ ನ್ಯಾಯವೆಂದರೆ ಕೇವಲ ನ್ಯಾಯಲಯಕ್ಕೆ ದೂರು ಒಯ್ಯುವುದಲ್ಲ. ವಕೀಲರಿಂದ ನ್ಯಾಯಕೊಡಿಸುವುದೂ ಅಲ್ಲ. ಆಗಿನ ಕಾಲದಲ್ಲಿ ಸುಳ್ಳು ಸಾಕ್ಷಿ ಹೇಳುವುದು, ಸಾಕ್ಷಿಯ ದುರುಪಯೋಗ ಮಾಡಿಕೊಳ್ಳುವುದು ಇವೆಲ್ಲ ಕ್ವಚಿತ್ತಾಗಿತ್ತು. ಆದುದರಿಂದ ಅವನ ಕಲ್ಪನಾ ರಾಜ್ಯದಲ್ಲಿ ವಕೀಲವೃತ್ತಿಗೆ ಆಸ್ಪದವಿಲ್ಲ. ರಾಜನ ಆಸ್ಥಾನದ ನ್ಯಾಯಾಧೀಶರು ಇದ್ದರು. ಪ್ರಜೆಗಳು ಅವರಿಗೆ ಮೇಲ್ಮನವಿ ಮಾಡಿಕೊಳ್ಳುವ ಅವಕಾಶವಿತ್ತು. ಕೆಲವೊಮ್ಮೆ ರಾಜನೇ ಪ್ರಜೆಗಳ ಯೋಗಕ್ಷೇಮಕ್ಕಾಗಿ ತಾನೇ ಮಧ್ಯ ಪ್ರವೇಶಿಸುತ್ತಿದ್ದ, ತಾನೇ ನ್ಯಾಯ ನಿರ್ಣಯ ಮಾಡುತ್ತಿದ್ದ.

ಇಷ್ಟೆಲ್ಲ ಹೇಳಿದ ಮೇಲೂ ಒಂದು ಮಾತನ್ನು ಒತ್ತಿಹೇಳಬೇಕು. ಶಾಸನದ ಭೀತಿ ಮತ್ತು ನೈತಿಕ ಹೊಣೆ ಪ್ರಜೆಗಳಿಗೆ ಇರಬೇಕು ಎಂದು ಹಾಮೂರಾಬಿ ಹೇಳುತ್ತಾನೆ. ನ್ಯಾಯಾಧೀಶನ ಬಳಿಗೆ ಪದೇ ಪದೇ ದೂರು ಒಯ್ಯುವ ಅವಕಾಶ ಇರಬಾರದು. ಸುಳ್ಳು ಸಾಕ್ಷಿ ಹೇಳಿ ನ್ಯಾಯವನ್ನು ತಿರುಚಬಾರದು. ಹಾಗೆ ಸುಳ್ಳು ಸಾಕ್ಷಿ ಹೇಳಿದವನಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಸಿವಿಲ್ ವ್ಯಾಜ್ಯವೊಂದರಲ್ಲಿ ಯಾವನಾದರೊಬ್ಬನು ಸುಳ್ಳು ಸಾಕ್ಷಿ ಹೇಳಿದರೆ ಅವನಿಗೆ ವ್ಯಾಜ್ಯದ ಖರ್ಚು ಸಹಿತ ದಂಡ ಹೇರಲು ಬರುತ್ತದೆ. ಆದರೆ ಮರಣ ಶಿಕ್ಷೆಗೆ ಯೋಗ್ಯವಾದ ಪ್ರಕರಣವೊಂದರಲ್ಲಿ ಸುಳ್ಳು ಸಾಕ್ಷಿ ಹೇಳುವುದು ಮಹಾಪಾಪವೆಂದು ವರ್ಣಿಸಲಾಗಿದೆ. ಶಾಸನದ ಮೊದಲ ನಿಯಮ ಹೀಗಿದೆ: ''ಒಬ್ಬ ವಾದಿಯು ಇನ್ನೊಬ್ಬ ನಾಗರಿಕನ ವಿರುದ್ಧ ದೂರುಕೊಟ್ಟು, ಮರಣಶಿಕ್ಷೆಗೆ ಯೋಗ್ಯವಾದ ಅಪರಾಧ ಮಾಡಿದ್ದಾನೆಂದು ಅಪವಾದವನ್ನು ಹೊರಿಸಿದ್ದರೆ, ಅವನು ಅದನ್ನು ಸಾಬೀತುಗೊಳಿಸದೇ ಹೋದರೆ, ಆ ವಾದಿಯನ್ನೇ ಮರಣದಂಡನೆಗೆ ವಿಧಿಸಬೇಕು.'' ಈ ನ್ಯಾಯ ಸೂತ್ರದ

ಹಿಂದಿರುವ ಆಶಯವೆಂದರೆ ಸುಳ್ಳು ಸಾಕ್ಷಿಯ ಮೂಲಕ ನ್ಯಾಯದ ತಕ್ಕಡಿಯನ್ನು ಏರುಪೇರು ಮಾಡಬಾರದು ಎಂದು.

ಹಾಮೂರಾಬಿ ನ್ಯಾಯಸೂತ್ರಗಳ ಮಹತ್ವವನ್ನು ಗ್ರಹಿಸಿ ಆ ಕಾಲದಲ್ಲಿ ಪ್ರಚಲಿತವಿದ್ದ ಪರಸ್ಪರ ವಿರೋಧೀ ಕಾನೂನುಗಳನ್ನೂ ವ್ಯವಹಾರದ ನಿಯಮಗಳನ್ನು ಏಕರೂಪದಲ್ಲಿ ತರಲು ಪ್ರಯತ್ನಿಸಿದ. ತನಗೂ ಹಿಂದೆ ಬರಹದಲ್ಲಿ ಇದ್ದ ಕಾನೂನುಗಳನ್ನೆಲ್ಲ ಸಂಗ್ರಹಿಸಿದ. ವ್ಯಾಪಾರ ವಾಣಿಜ್ಯಕ್ಕೆ ಸಂಬಂಧಿಸಿದ ರೂಢಿ ನಿಯಮಗಳನ್ನು ಕಲೆಹಾಕಿ ವ್ಯವಸ್ಥೆಗೊಳಿಸಿದ. ತನ್ನ ನ್ಯಾಯನಿರ್ಣಯ ಬುದ್ಧಿಗೆ ಸರಿಕಂಡ ರೀತಿಯಲ್ಲಿ ಅವುಗಳನ್ನು ಸುಧಾರಿಸಲು ಪ್ರಯತ್ನಿಸಿದ; ಕೆಲವು ಹೊಸ ಸೂತ್ರಗಳನ್ನು ಸೇರಿಸಿದ. ಹೀಗೆ ಅವನ ಶಾಸನ ಸಿದ್ಧವಾಯಿತು. ಅದೇ ಮುಂದೆ ಆಳಬೇಕೆಂದು ಹಾಮೂರಾಬಿಯ ಆಶಯವಿದ್ದಂತೆ ಕಾಣುತ್ತದೆ.

ಅವನ ಶಾಸನ ದೇವರ ಇಚ್ಛೆಯನ್ನು ಪ್ರತಿಬಿಂಬಿಸುವ ಶಾಸನವಲ್ಲ. ಅದು ಸಾಮಾಜಿಕ ರಾಜಕೀಯ ಇಚ್ಛೆಯನ್ನು ಪ್ರತಿನಿಧಿಸುವ ಶಾಸನವಾಗಿತ್ತು. ಸಾಮಾಜಿಕ ರಾಜಕೀಯ ನಿಷ್ಠೆಯೇ ಬಲವಾಗಿತ್ತು. ಆದುದರಿಂದಲೇ ಹಾಮೂರಾಬಿ ದೇವಾಲಯದಲ್ಲಿ ಕಳ್ಳತನ ಮಾಡಿದವನಿಗೂ ಮನೆಗೆ ಕನ್ನ ಹಾಕಿದವನಿಗೂ ಒಂದೇ ಬಗೆಯ ಶಿಕ್ಷೆಯನ್ನು ಹೇಳಿದ್ದಾನೆ. ಕಳ್ಳರನ್ನೂ ದರೋಡೆಕೋರರನ್ನೂ ಹಿಡಿಯದ ಅಧಿಕಾರಿಗಳ ಕೈಯಿಂದ ನಷ್ಟ ಅನುಭವಿಸಿದ ವ್ಯಕ್ತಿಗೆ ಪರಿಹಾರ ಕೊಡಿಸುವುದೂ ಇದೇ ಕಾರಣಕ್ಕಾಗಿ. ವಿವಾಹ ವಿಚ್ಛೇದನ ಪಡೆದ ಹೆಂಡತಿಗೂ ತೀರಿಕೊಂಡ ಹೆಂಡತಿಯ ಮಕ್ಕಳಿಗೂ ಆಸ್ತಿಯ ಹಕ್ಕು ಕೊಡುವಂತೆ ಹೇಳಿದ್ದು ಇದೇ ಕಾರಣಕ್ಕಾಗಿ.

ಒಟ್ಟಿನಲ್ಲಿ, ಹಾಮೂರಾಬಿ ನ್ಯಾಯಶಾಸನದ ಮಹತ್ವವನ್ನು ಗ್ರಹಿಸಿದವರಲ್ಲಿ ಮೊದಲಿಗನೆಂದರೆ ತಪ್ಪಾಗಲಾರದು.

ಅಧ್ಯಾಯ ೮

ವ್ಯಾಪಾರ, ವಾಣಿಜ್ಯ, ಶ್ರಮ

ಹಾಮುರಾಬಿ ಶಾಸನದಲ್ಲಿ ಸುಮಾರು ನಲವತ್ತು ಶಾಸನಗಳು ವ್ಯಾಪಾರ, ವಾಣಿಜ್ಯ ಮತ್ತು ಶ್ರಮ ವಿಷಯಗಳ ಮೇಲಿವೆ. ಆ ಕಾಲದಲ್ಲಿ ಇಂಥ ವಿಷಯಗಳನ್ನು ಕುರಿತು ಹೀಗೆ ವಿಪುಲವಾದ ನಿಯಮಗಳು ಸೃಷ್ಟಿಯಾಗಿರುವುದು ಗಮನಾರ್ಹ. ಬೆಬಿಲೋನಿನಂಥ ನಗರಕ್ಕೆ ಅವು ಅವಶ್ಯವಿರುವುದನ್ನು ಮನಗಂಡು ಅಷ್ಟು ಸೂತ್ರಗಳನ್ನು ರಚಿಸಿರಬಹುದು.

ಇಲ್ಲಿ ಜಗತ್ತಿನ ಮೊಟ್ಟಮೊದಲ ಶ್ರಮ ಕಾನೂನು ಬಂದಿದೆ. ಕೂಲಿ ಸಂಬಳಗಳ ಬಗೆಗೆ ನಿರ್ದಿಷ್ಟ ಸೂಚನೆಗಳಿವೆ. ಈ ಸೂತ್ರಗಳ ಪ್ರಕಾರ ಸರಕಾರವು ಬೆಲೆಗಳನ್ನೂ ವೇತನಗಳನ್ನೂ ದರಗಳನ್ನೂ ನಿಯಂತ್ರಿಸಲು ಸಾಧ್ಯವಿತ್ತು. ಒಂದು ಸೂತ್ರದಲ್ಲಿ ವೈದ್ಯನ ಶುಲ್ಕ ನಿಗದಿಯಾಗಿತ್ತು. ಹಾಗೆಯೇ ಕಟ್ಟಡ ಕಟ್ಟುವವರು, ಇಟ್ಟಿಗೆ ತಯಾರಕರು, ಹೊಲಿಗೆಯವರು, ಕಲ್ಲಿನ ಕೆಲಸದವರು, ಬಡಗಿಯರು, ದೋಣಿಕಾರರು, ದನಗಾಹಿಗಳು ಮತ್ತು ಕೂಲಿಕಾರರ ಸಂಬಳವು ಕೂಡ ನಿಗದಿಯಾಗಿತ್ತು.

ಆಸ್ತಿ ಹಕ್ಕುಗಳ ಬಗ್ಗೆ ಸೂತ್ರಗಳು ರಚಿಸಲ್ಪಟ್ಟಿವೆ. ಹಾಗೆಯೇ ನಷ್ಟ ಪರಿಹಾರದ ಬಗೆಗೂ ನಿಯಮಗಳಿವೆ. ಆ ಕಾಲದಲ್ಲಿ ಗುಲಾಮರ ಶ್ರಮ

ಅತ್ಯಾವಶ್ಯಕವಾಗಿತ್ತು. ಹೀಗಾಗಿ ಗುಲಾಮನನ್ನು ಕೊಂದರೆ ಅವನ ಬದಲಿಗೆ ಇನ್ನೊಬ್ಬ ಗುಲಾಮನನ್ನು ಒದಗಿಸಬೇಕಾಗಿತ್ತು. ಓಡಿ ಹೋಗುವ ಗುಲಾಮನಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು.

ಬೇರೆ ಬೇರೆ ವೃತ್ತಿಗಳವರ ಕೌಶಲ್ಯಕ್ಕೆ ಶುಲ್ಕಗಳನ್ನು ನಿಗದಿಪಡಿಸಲಾಗಿತ್ತು. ಮುಖ್ಯವಾಗಿ ವೈದ್ಯನಿಗೆ, ಗೃಹಶಿಲ್ಪಿಗೆ, ಪಶುಚಿಕಿತ್ಸಕನಿಗೆ ಇಂತಿಷ್ಟೇ ಶುಲ್ಕ ಎಂದು ನಿಗದಿಯಾಗಿತ್ತು. ಉದಾಹರಣೆಗೆ, ಒಂದು ಸೂತ್ರ ಹೀಗೆ ಹೇಳುತ್ತದೆ: "ಗೋವುಗಳ ವೈದ್ಯನು ಅಥವಾ ಕುರಿಗಳ ವೈದ್ಯನು ಒಂದು ಗೋವಿಗೆ ಅಥವಾ ಕುರಿಗೆ ಆದ ತೀವ್ರ ಗಾಯವನ್ನು ಚಿಕಿತ್ಸೆಯಿಂದ ಗುಣಪಡಿಸಿದ್ದರೆ, ಆ ಗೋವು ಅಥವಾ ಕುರಿಯ ಮಾಲಿಕನು ವೈದ್ಯನಿಗೆ ೧/೬ ಭಾಗ ಬೆಳ್ಳಿ ಶಕೆಲನ್ನು ಶುಲ್ಕವಾಗಿ ಕೊಡಬೇಕು."

ಬೆಬಿಲೋನ್ ನಗರ ಜಗತ್ತಿನ ಪ್ರಮುಖ ವ್ಯಾಪಾರ, ವಾಣಿಜ್ಯ ಮತ್ತು ವೃತ್ತಿಗಳ ಕೇಂದ್ರವಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ಉತ್ತಮ ಆಡಳಿತಗಾರನಾಗಿದ್ದ ಹಾಮೂರಾಬಿ ಸಾಕಷ್ಟು ನಿಗಾ ವಹಿಸಿದ್ದು ಸಹಜ. ಅವನ ಕಾಳಜಿ ಸೂತ್ರರೂಪದಲ್ಲಿ ಪೋಣಿಸಲ್ಪಟ್ಟಿದೆ, ಅಷ್ಟೆ!

ಅಧ್ಯಾಯ ೯

ನಷ್ಟ ಪರಿಹಾರ ಕೊಡುವ ರಾಜ್ಯ

ಹಾಮೂರಾಬಿಯ ಶಾಸನದಲ್ಲಿ ಎಲ್ಲರ ಮೆಚ್ಚುಗೆಯನ್ನು ಪಡೆದ ಒಂದು ಅಂಶವೆಂದರೆ ಪ್ರಜೆಗಳಿಗೆ ಬೇರೆ ಬೇರೆ ಕಾರಣಗಳಿಂದ ಉಂಟಾಗುವ ನಷ್ಟವನ್ನು ಸರಕಾರ ಭರಿಸಿಕೊಡಬೇಕು ಎಂಬ ತತ್ವವನ್ನು ಒಪ್ಪಿಕೊಳ್ಳಲಾಗಿತ್ತು. ರಾಜ್ಯದ ಮುಖ್ಯ ಕರ್ತವ್ಯವೆಂದರೆ ಜನರ ಪ್ರಾಣ ಮತ್ತು ಆಸ್ತಿಪಾಸ್ತಿಯನ್ನು ಸಂರಕ್ಷಿಸುವುದು. ಈ ಕೆಲಸದಲ್ಲಿ ತಪ್ಪಿದರೆ ಸರಕಾರವೇ ಅದಕ್ಕೆ ಹೊಣೆ. ಮುಖ್ಯವಾಗಿ ಕಳವು, ದರೋಡೆಗಳಿಗೆ ಗುರಿಯಾದ ಜನರ ಪ್ರಾಣಹಾನಿ ಅಥವಾ ಧನಹಾನಿಗೆ ಸರಕಾರವು ಪರಿಹಾರ ಕೊಡಬೇಕಾಗಿತ್ತು. ಸರಕಾರದ ಅಧಿಕಾರಿಗಳು ಇಂಥ ಪ್ರಕರಣಗಳ ಬಗ್ಗೆ ಸೂಕ್ತ ವಿವರಣೆ ಕೊಡಬೇಕು ಹಾಗೂ ಜನರಿಗಾದ ನಷ್ಟಕ್ಕೆ ಪರಿಹಾರ ಒದಗಿಸಬೇಕು.

ಒಂದು ನ್ಯಾಯ ಸೂತ್ರ ಹೀಗೆ ಹೇಳುತ್ತದೆ: ''ದರೋಡೆಯಲ್ಲಿ ಪಾಲುಗೊಂಡ ವ್ಯಕ್ತಿಯನ್ನು ಸರಕಾರದ ಅಧಿಕಾರಿಗಳು ಹಿಡಿದ ಪಕ್ಷದಲ್ಲಿ, ಆ ದರೋಡೆಕಾರನಿಗೆ ಮರಣದಂಡನೆ ವಿಧಿಸಬೇಕು. ಅಂಥ ದರೋಡೆಕಾರರನ್ನು ಹಿಡಿಯದೇ ಹೋದರೆ, ದರೋಡೆಗೆ ಒಳಗಾಗಿ ತನ್ನ ಸಂಪತ್ತನ್ನು ಅಥವಾ ಮಾಲನ್ನು ಕಳೆದುಕೊಂಡವನು ದೇವರ ಸಮಕ್ಷಮ

ತಾನು ಯಾವ ಯಾವ ವಸ್ತುಗಳನ್ನು ಕಳೆದುಕೊಂಡಿದ್ದೇನೆ, ತನಗೆಷ್ಟು ನಷ್ಟವಾಗಿದೆ ಎಂದು ವಿವರವಾದ ಪಟ್ಟಿಮಾಡಿ ಸಂಬಂಧಪಟ್ಟ ನಗರದ ಆಡಳಿತಗಾರನಿಗೆ ತಿಳಿಸಬೇಕು. ಅವನು ಅಷ್ಟು ನಷ್ಟವನ್ನು ಬಾಧಿತನಿಗೆ ತುಂಬಿಕೊಡಬೇಕು. ಒಂದು ವೇಳೆ ಪ್ರಾಣಹಾನಿ ಆಗಿದ್ದರೆ ಬಾಧಿತನ ಉತ್ತರಾಧಿಕಾರಿಗಳಿಗೆ ಸೂಕ್ತ ಪರಿಹಾರ (ಸುಮಾರು ಒಂಬತ್ತು ಸಾವಿರ ರೂಪಾಯಿಯಷ್ಟು ಕನಿಷ್ಠ ಪರಿಹಾರ ಎಂದು ಲೆಕ್ಕಹಾಕಿ) ಕೊಡಬೇಕಾಗುತ್ತದೆ.''

ಪ್ರಸಿದ್ಧ ಇತಿಹಾಸಕಾರರೂ ತತ್ವಜ್ಞಾನಿಗಳೂ ಆದ ವಿಲ್ ಡ್ಯುರಾಂಟ್ ತಮ್ಮ ''ನಾಗರಿಕತೆಯ ಕಥೆ'' ಗ್ರಂಥದಲ್ಲಿ ಹಾಮೂರಾಬಿಯ ಈ ಪ್ರಗತಿಪರ ಅಂಶವನ್ನು ಹೀಗೆ ಹೊಗಳಿದ್ದಾರೆ: ''ಆಡಳಿತೆಯ ನಿರ್ಲಕ್ಷ್ಯತನದಿಂದ ಹಾನಿಗೊಳಗಾದವನಿಗೆ ಪರಿಹಾರವನ್ನು ಕೊಡುವ ಈ ದಿಟ್ಟತನವನ್ನು ತೋರಿಸುವಷ್ಟು ಒಳ್ಳೆಯದಾದ ಆಧುನಿಕ ನಗರ ಯಾವುದಿದೆ ? ಹಾಮುರಾಬಿಯ ಕಾಲದಿಂದೀಚೆಗೆ ಶಾಸನ ವ್ಯವಸ್ಥೆಯಲ್ಲಿ ಏನಾದರೂ ಪ್ರಗತಿ ಆಗಿದೆ ಎನ್ನುವುದು ಸಾಧ್ಯವೆ ? ಅಥವಾ ಕಾನೂನುಗಳು ಕೇವಲ ಸಂಖ್ಯೆಯಲ್ಲಿ ಬೆಳೆಯುತ್ತ ಹೋಗಿವೆಯೆ ?''

ವಿಲ್ ಡ್ಯುರಾಂಟ್ ಸುಮಾರು ಅರವತ್ತು ವರ್ಷಗಳ ಹಿಂದೆ ಕೇಳಿದ ಪ್ರಶ್ನೆಗೆ ಈಗಲೂ ನಮ್ಮಲ್ಲಿ ಉತ್ತರವಿಲ್ಲ. ಹಾಮುರಾಬಿ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಆದ ಪ್ರಾಣಹಾನಿ ಮತ್ತು ಧನಹಾನಿಗೆ ಪರಿಹಾರ ಒದಗಿಸುವುದರ ಜೊತೆಜೊತೆಗೆ ಸರಕಾರದ ಅಜಾಗರೂಕತೆಯಿಂದ ಪ್ರಜೆಗಳಿಗೆ ಒದಗುವ ಪ್ರಾಣಹಾನಿ ಮತ್ತು ಧನಹಾನಿಗೂ ಪರಿಹಾರ ಒದಗಿಸುವ ಧೈರ್ಯ ತೋರಿಸಿದ್ದ. ಈಗಿನ ಸರಕಾರಗಳೂ ಸರಕಾರದ ಅಧಿಕಾರಿಗಳೂ ಇಂಥ ಧೈರ್ಯ ತೋರಿಸಿಯಾರೆ ?

ಅಧ್ಯಾಯ ೧೦

ಸಾಮಾಜಿಕ ನ್ಯಾಯದ ಮೊದಲ ನಿಶಾನೆ

ಹಾಮುರಾಬಿ ಪ್ರಸಿದ್ಧನಾಗಿರುವುದು ಅಥವಾ ಕುಪ್ರಸಿದ್ಧನಾಗಿರುವುದು ಅವನ 'ಕಣ್ಣಿಗೊಂದು ಕಣ್ಣು, ಹಲ್ಲಿಗೊಂದು ಹಲ್ಲು' ಎಂಬ ಪ್ರತೀಕಾರ ನ್ಯಾಯಕ್ಕಾಗಿ. ಹೌದು, ಆ ತತ್ವವನ್ನು ಹೆಚ್ಚು ಆಕರ್ಷಕ ರೀತಿಯಲ್ಲಿ, ಸುಸ್ಪಷ್ಟವಾಗಿ ಹೇಳಿದವನು ಅವನೇ. ಆದರೆ ಇಂಥ ಪ್ರತೀಕಾರ ನ್ಯಾಯತತ್ವವನ್ನು ಮೀರಿನಿಂತ ನ್ಯಾಯದ ಕಲ್ಪನೆ ಅವನ ಶಾಸನದಲ್ಲಿದೆ. ಅದನ್ನು ಈಗ 'ಸಾಮಾಜಿಕ ನ್ಯಾಯ' ಎಂದು ಕರೆಯಬಹುದೇನೊ! ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ಹಾಮುರಾಬಿ ಅಂಥ ವಿಚಾರವೊಂದನ್ನು ಪ್ರಚುರ ಪಡಿಸಿದ ಎಂದರೆ ನಂಬುವುದಕ್ಕೂ ಕಷ್ಟ! ಅವನ ಕೆಲವು ಚಿಂತನೆಗಳನ್ನು ಸಾಮಾಜಿಕ ನ್ಯಾಯವೆನ್ನಲಿ ಅಥವಾ ಬೇರೆ ಹೆಸರುಗಳಿಂದ ಕರೆಯಲಿ–ಆ ವಿಚಾರಗಳು ಆಗಿನ ಕಾಲಕ್ಕೆ ಕ್ರಾಂತಿಕಾರಕವಾಗಿದ್ದವು. ಅದರಲ್ಲೂ ಬೆಬಿಲೋನ ರಾಜ್ಯವನ್ನು ಸರ್ವಾಧಿಕಾರಿಯಂತೆ ಆಳಿದ ರಾಜನೊಬ್ಬನು ಅಂಥ ವಿಚಾರಗಳನ್ನು ಪ್ರಚುರಪಡಿಸುವುದು ನಿಜಕ್ಕೂ ಆಶ್ಚರ್ಯಕರ. ಅನೇಕ ಶತಮಾನಗಳ ನಂತರ ಅಶೋಕನಂಥ ರಾಜರುಗಳು ಹಾಮುರಾಬಿಯ ನ್ಯಾಯಸೂತ್ರಗಳಿಗಿಂತ ಹೆಚ್ಚು ಮಾನವೀಯವಾದ ನ್ಯಾಯಸೂತ್ರಗಳನ್ನು

ಕಲ್ಯಾಣ ಕಾರ್ಯಕ್ರಮಗಳನ್ನೂ ರೂಪಿಸಿದ್ದು ನಿಜ. ಆದರೆ ಅತಿ ಪ್ರಾಚೀನ ನಾಗರಿಕತೆಯೊಂದು ತನ್ನ ಪ್ರಾರಂಭಿಕ ಸ್ಥಿತಿಯಲ್ಲಿ ಸಾಮಾಜಿಕ ನ್ಯಾಯದ ಮೊದಲ ನಿಶಾಶೆ ನೆಟ್ಟಿರುವುದನ್ನು ನಾವು ಹಾಮೂರಾಬಿಯ ಶಾಸನವಲ್ಲಿ ಕಾಣಬಹುದು.

ಹೀಗಿದ್ದರೂ ಹಾಮೂರಾಬಿಯನ್ನು ಪ್ರತೀಕಾರ ನ್ಯಾಯದ ಕರ್ತೃವೆಂದು ಗುರುತಿಸುತ್ತ ಬಂದಿದ್ದೇವೆ. ಅವನು ಆ ತತ್ವದ ಜನಕನೆ? ಮೂರು ಕಾರಣಗಳಿಗಾಗಿ ಜನಪ್ರಿಯ ಇತಿಹಾಸಕಾರರ ಭಾವನೆಗಳು ತಪ್ಪು. ಈ ವಿಷಯದಲ್ಲಿ ಅವನಿಗೆ ಅನ್ಯಾಯ ಮಾಡಲಾಗುತ್ತಿದೆ.

ಮೊದಲನೆಯದಾಗಿ, ಹಾಮೂರಾಬಿ ಪ್ರತೀಕಾರ ನ್ಯಾಯದ ಜನಕನಲ್ಲ. ಆ ನ್ಯಾಯ ಆದಿಮಾನವ ಜನಾಂಗಗಳಲ್ಲಿ ಸಾರ್ವತ್ರಿಕ ಎನ್ನುವಷ್ಟು ಮಟ್ಟಿಗೆ ಕಂಡುಬರುತ್ತದೆ. ಹಾಮೂರಾಬಿ ಕಟ್ಟಿದ ಬೆಬಿಲೋನ್ ಸಾಮ್ರಾಜ್ಯದಲ್ಲಿ ಅದು ಆ ಮೊದಲೇ ಪ್ರಚಾರದಲ್ಲಿತ್ತು. ಆದುದರಿಂದ ಅದರ ಕೆಲವು ಅಂಶಗಳನ್ನು ಅವನು ಉಳಿಸಿಕೊಂಡಿದ್ದ. ಮನೆಕಟ್ಟುವಾಗ ಮೋಸವಾಗದಿರಲಿ ಎಂದು ಕೆಲವು ನ್ಯಾಯಸೂತ್ರಗಳನ್ನು ರೂಪಿಸಿದರೆ, ಒಬ್ಬ ಪ್ರಜೆಯ ಅಂಗವು ಭಗ್ನವಾಗಿದ್ದರೆ, ಹಾಗೆ ಭಗ್ನಗೊಳಿಸಿದವನ ಅಂಗವನ್ನೇ ಭಗ್ನಗೊಳಿಸಬೇಕೆಂದು ವಿಧಿಸಿದ್ದಾನೆ. ಇಂಥ ನ್ಯಾಯಸೂತ್ರಗಳು ಕ್ರೂರವೆನ್ನಿಸಿದರೂ ಅವನಿದ್ದ ಕಾಲದಲ್ಲಿ ಅವಶ್ಯವೆನಿಸಿರಬಹುದು. ಇನ್ನೂ ನಾಗರಿಕತೆಯೆಡೆಗೆ ಕಾಲಿಡುತ್ತಿದ್ದ ಬೆಬಿಲೋನಿಗೆ ಅದು ಬೇಕಿತ್ತೋ ಏನೋ! ಹಾಮೂರಾಬಿಯ ಕಾಲದಲ್ಲಿ ಮಾತ್ರವಲ್ಲ, ಸಂಸ್ಕೃತಿ ಮತ್ತು ನಾಗರಿಕತೆಗಳು ಬೆಳೆದು ನಿಂತ ಮುಂದಿನ ಕಾಲದಲ್ಲಿಯೂ ಈ ಭಾವನೆ ಪೂರ್ತಿಯಾಗಿ ತೊಡೆದುಹೋಗಿಲ್ಲ. ಪ್ರತೀಕಾರ ಭಾವನೆ ಪ್ರಾಣಿಸಹಜವಾದುದು. ಮಾನವ ಸಹಜವೂ ಹೌದೇನೋ! ಅದು ಆಧುನಿಕ ಕಾಯ್ದೆ ಕಾನೂನುಗಳಲ್ಲಿಯೂ ಉಳಿದುಕೊಂಡಿರುವುದನ್ನು ನೋಡಿದರೆ ಹಾಮೂರಾಬಿಯನ್ನು ಪ್ರತೀಕಾರ ನ್ಯಾಯದ ಜನಕ ಎನ್ನುವುದು ತಪ್ಪು ಎನ್ನಬೇಕು.

ಎರಡನೆಯದಾಗಿ, ಹಾಮೂರಾಬಿಯೊಬ್ಬನೇ ಅಲ್ಲದೆ ಇತರ ಶಾಸನಕಾರರೂ ಪ್ರತೀಕಾರ ತತ್ವವನ್ನೂ ತಾರತಮ್ಯ ತತ್ವವನ್ನೂ ಬಳಸಿದ್ದಾರೆ. ಉದಾಹರಣೆಗೆ, ಭಾರತದ ಧರ್ಮಶಾಸ್ತ್ರಕಾರನಾದ ಮನುವು ವರ್ಣತಾರತಮ್ಯ ತತ್ವವನ್ನು ಒಪ್ಪಿ ಬಹಳ ನಿಷ್ಠೆಯಿಂದ ಪ್ರತಿಪಾದಿಸಿದ್ದಾನೆ ಎಂಬುದನ್ನು ನೆನಪಿಡಬೇಕು.

ಮೂರನೆಯದಾಗಿ, ಹಾಮೂರಾಬಿಯು ಪ್ರತೀಕಾರ ನ್ಯಾಯಕ್ಕಿಂತ ಶ್ರೇಷ್ಠವಾದ ಅನೇಕ ನಿಯಮಗಳನ್ನು ಕೊಟ್ಟಿದ್ದಾನೆ. ಅವುಗಳನ್ನು ನಾವು ಮರೆಯಬಾರದು ಅಥವಾ ಅವುಗಳ ಮಹತ್ವವನ್ನು ಅಲ್ಲಗಳೆಯಬಾರದು.

ಹಾಮೂರಾಬಿಯದು ಕೇವಲ ಪ್ರತೀಕಾರ ನ್ಯಾಯವಲ್ಲ. ತಾರತಮ್ಯ ತತ್ವವನ್ನು ಮೆರೆಸುವ ಅನ್ಯಾಯದ ನ್ಯಾಯಸೂತ್ರವೂ ಅಲ್ಲ. ಅದು ಸಾಮಾಜಿಕ ನ್ಯಾಯದ ಮೊದಲ ಕುರುಹು; ಮೊದಲ ನಿಶಾನೆ. ಭೂಮಾಲಿಕರು ಒಕ್ಕಲುಗಳನ್ನೂ ಸಾಹುಕಾರರು ಸಾಲಗಾರರನ್ನೂ ವ್ಯಾಪಾರಿಗಳು ಗ್ರಾಹಕರನ್ನೂ ಶ್ರೀಮಂತರು ಬಡವರನ್ನೂ ಶೋಷಣೆ ಮಾಡದಂತೆ ಹಾಮೂರಾಬಿ ಶಾಸನ ಮಾಡಿದ್ದಾನೆ. ಹಾಗೆಯೇ ಕೆಲವು ದುರ್ಜನರು ಬೇರೆಯವರಿಗೆ ಒದಗಿದ ಸಂಕಟಕಾಲದ ದುರುಪಯೋಗ ಪಡೆಯದಂತೆ ಅನೇಕ ನಿಯಮಗಳನ್ನು ಹೆಣೆದಿದ್ದಾನೆ. ಬೆಂಕಿ ಹೊತ್ತಿದ ಮನೆಯಿಂದ ಕಳವು ಮಾಡುವವರಿಗೆ ಮರಣದಂಡನೆ ವಿಧಿಸಿದ್ದು ಇವಕ್ಕೆ ಉದಾಹರಣೆ.

ಅವನ ಶಾಸನದ ಪ್ರಕಾರ ನೈಸರ್ಗಿಕ ಕಾರಣಗಳಿಂದ ಬೆಳೆಯಾಗದೇ ಇದ್ದಾಗ ಕಂದಾಯ ಕೊಡಬೇಕಾಗಿಲ್ಲ; ಅಂಥ ಸಂದರ್ಭಗಳಲ್ಲಿ ತೆಗೆದುಕೊಂಡ ಸಾಲದ ಮರುಪಾವತಿ ಮಾಡಬೇಕಾಗಿಲ್ಲ; ಆ ವರ್ಷದ ಬಡ್ಡಿ ತೆರಬೇಕಾಗಿಲ್ಲ. ಗುಲಾಮನೂ ಕೆಲವು ಷರತ್ತುಗಳನ್ನು ಪೂರೈಸಿದರೆ ಸ್ವತಂತ್ರನಾಗಬಹುದು ಎಂದು ಒಂದು ನ್ಯಾಯಸೂತ್ರ ಹೇಳುತ್ತದೆ.

ಕುಟುಂಬದ ಬಗೆಗೆ ಇರುವ ಕೆಲವು ನ್ಯಾಯಸೂತ್ರಗಳಂತೂ ಪೀಡಿತರ ಮತ್ತು ದುರ್ಬಲರ ಪರವಾಗಿ ಇವೆ. ಸ್ತ್ರೀಯರು ಮತ್ತು ಮಕ್ಕಳಿಗೂ ಕಾಯ್ದೆಯ ರಕ್ಷಣೆ ಇದೆ. ಅಂದಿನ ಕುಟುಂಬ ಪಿತೃ ಪ್ರಧಾನವಾಗಿತ್ತು. ಹಾಮೂರಾಬಿಯು ತತ್ಕಾಲೀನ ಕುಟುಂಬ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದ. ಆದರೂ ಕುಟುಂಬದ ಹಿರಿಯನು ಅಥವಾ ತಂದೆಯು ತನ್ನ ಮಕ್ಕಳು ಮೇಲೆ ರೋಮನ್ ತಂದೆಯ ಹಾಗೆ ಸಂಪೂರ್ಣ ಅಧಿಕಾರವನ್ನು ಚಲಾಯಿಸಲು ಸಾಧ್ಯವಿರಲಿಲ್ಲ. ಅವನ ಶಾಸನದಲ್ಲಿ ಒಂದು ಕಡೆ ಹೇಳಿದಂತೆ "ನಾಡಿನಲ್ಲಿ ನ್ಯಾಯವು ನೆಲೆಸುವಂತೆ ಮಾಡಲು, ವಂಚಕರನ್ನು ಮತ್ತು ದುಷ್ಟರನ್ನು ನಾಶಮಾಡಲು, ದುರ್ಬಲರನ್ನು ಪ್ರಬಲರು ಸದೆಬಡಿಯದಂತೆ ನೋಡಲು" ಅವನ ನ್ಯಾಯಸೂತ್ರಗಳು ರೂಪಿತವಾಗಿವೆ. ಹೀಗಿರುವಾಗ ಅಲ್ಲಿ ಸಾಮಾಜಿಕ ನ್ಯಾಯಕ್ಕೆ ಮಹತ್ವ ಸಿಕ್ಕಿರುವುದರಲ್ಲಿ ಆಶ್ಚರ್ಯವಿಲ್ಲ.

ಅಧ್ಯಾಯ ೧೧

ಹಾಮೂರಾಬಿ ಮತ್ತು ಮನು

ಹಾಮೂರಾಬಿಯ ಕಾಲದ ಬಗ್ಗೆ ಇದ್ದ ಭಿನ್ನಾಭಿಪ್ರಾಯಗಳನ್ನು ಹಿಂದೆ ನೋಡಿದೆವು. ಅದೇನಿದ್ದರೂ, ಅವನಿದ್ದ ಕಾಲ ಬೆಬಿಲೋನಿಯಾ ಸಂಸ್ಕೃತಿಯ ಉಚ್ಛ್ರಾಯಕಾಲ; ಸ್ವರ್ಣ ಯುಗ. ಅದೇ ರೀತಿಯಾಗಿ ಮನುವಿನ ಕಾಲದ ಬಗೆಗೂ ವಾದವಿವಾದಗಳಿವೆ. ಅವರೂ ಅವನಿದ್ದ ಕಾಲ ಅದೊಂದು ಸ್ವರ್ಣಯುಗ. ನಗರಗಳು, ಕೋಟೆ, ಕೊತ್ತಲುಗಳು, ಸಾಮ್ರಾಜ್ಯಗಳು ಉದಯಿಸಿ ರಾಜಕೀಯ ಐಕ್ಯದ ಹಾದಿಯಲ್ಲಿದ್ದ ಭಾರತದ ಸಂಸ್ಕೃತಿಗೆ ಮನು ಸಮರ್ಥ ಪ್ರತಿನಿಧಿಯಾಗಿದ್ದಾನೆ. ಇದೇ ರೀತಿಯಾಗಿ ರಾಜಕೀಯ ಐಕ್ಯವನ್ನು ಸಾಧಿಸಿದ ಬೆಬಿಲೋನಿಯಾ ಸಂಸ್ಕೃತಿಯ ಅದ್ವಿತೀಯ ಪ್ರತಿನಿಧಿ ಹಾಮುರಾಬಿ. ಇಬ್ಬರೂ ತಮ್ಮ ತಮ್ಮ ಸಾಮಾಜಿಕ ವ್ಯವಸ್ಥೆಗಳನ್ನು ಚೆನ್ನಾಗಿ ಬಿಂಬಿಸುತ್ತಾರೆ. ಅವರಿಬ್ಬರೂ ಪ್ರಾಚೀನ ಜಗತ್ತಿನ ಮಹಾನ್ ಶಾಸನಕಾರರು. ಅವರಲ್ಲಿನ ಹೋಲಿಕೆ ಅಂತರಗಳನ್ನು ಪರೀಕ್ಷಿಸಿದರೆ ಅವರ ಬಗ್ಗೆ ಸರಿಯಾದ ತಿಳುವಳಿಕೆ ಮೂಡೀತು.

ಅವರ ವಿಚಾರಗಳಲ್ಲಿ ಅನೇಕ ಸಾಮ್ಯಗಳಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನೋಡಬಹುದು:

೧. ಇಬ್ಬರೂ ಸಾಮಾಜಿಕ ವರ್ಗ ಅಥವಾ ವರ್ಣಭೇದಗಳನ್ನು ಒಪ್ಪಿ ತಾರತಮ್ಯಗಳನ್ನು ನಂಬಿದ್ದಾರೆ. ಹಾಮುರಾಬಿ ಮೂರು ವರ್ಗಗಳನ್ನು ಹೇಳಿದರೆ, ಮನುವು ನಾಲ್ಕು ವರ್ಣಗಳನ್ನು ಹೇಳಿ ತಾರತಮ್ಯ ನ್ಯಾಯವನ್ನು ಒಪ್ಪಿದ್ದಾನೆ.
೨. ಇಬ್ಬರೂ ಪ್ರತೀಕಾರ ನ್ಯಾಯದಲ್ಲಿ ವಿಶ್ವಾಸ ತಳೆದವರು.
೩. ಇಬ್ಬರೂ ಸ್ತ್ರೀ–ಪುರುಷರು ಸಮಾನ ಎಂಬುದನ್ನು ನಂಬುವುದಿಲ್ಲ.
೪. ಇಬ್ಬರೂ ಗುಲಾಮಗಿರಿ ಪದ್ಧತಿಯನ್ನು ಒಪ್ಪಿಕೊಂಡಿದ್ದಾರೆ. ಮನುವು ಹಾಮೂರಾಬಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಯುದ್ಧಕಾಲದಲ್ಲಿ ಶರಣಾಗತರಾದವರು, ದಿನದ ಅಂಬಲಿಗಾಗಿ ಸೇವೆ ಮಾಡುವವರು, ಮನೆಯಲ್ಲಿಯೇ ಹುಟ್ಟಿದ ದಾಸರು, ಕ್ರಯಕ್ಕೆ ಕೊಂಡ ದಾಸರು, ಬಳುವಳಿಯಾಗಿ ಬಂದವರು, ಪೂರ್ವಜರಿಂದ ವಂಶಪಾರಂಪರ್ಯವಾಗಿ ಬಂದವರು, ಶಿಕ್ಷೆಗೊಳಗಾಗಿ ಗುಲಾಮರಾದವರು – ಹೀಗೆ ಏಳು ರೀತಿಯ ಗುಲಾಮರನ್ನು ಹೆಸರಿಸಿದ್ದಾನೆ.
೫. ಆಸ್ತಿ ಮತ್ತು ವೇತನಗಳ ಬಗ್ಗೆ ಅವರಿಬ್ಬರ ಅಭಿಪ್ರಾಯಗಳು ಸಮಾನವಾಗಿವೆ. ಆದರೆ ಮನು ಕಾರ್ಮಿಕರಿಗಾಗಿ ನಿಯಮಿಸಿದ ನಿಯಮಗಳು ಆಧುನಿಕ ವಿಚಾರಗಳಿಗೆ ಹೆಚ್ಚು ಸಮೀಪವಾಗಿ ಕಾಣುತ್ತವೆ.
೬. ದಂಡನೆಗಳನ್ನು ವಿಧಿಸುವಲ್ಲಿ ಇಬ್ಬರೂ ಸ್ವಲ್ಪ ಬಿಗುವಿನ ಧೋರಣೆಯವರು. ಇವರಿಬ್ಬರೂ ವಿಧಿಸುವ ಕೆಲವು ದಂಡನೆಗಳು ಅತಿ ಕ್ರೂರವಾಗಿವೆ.

ಇನ್ನು ನಾವು ಗುರುತಿಸಬಹುದಾದ ಕೆಲವು ಮುಖ್ಯವಾದ ಭೇದಗಳನ್ನು ನೋಡೋಣ:

೧. ಮನುವಿನದು ಮುಖ್ಯವಾಗಿ ಧಾರ್ಮಿಕ ಹಾಗೂ ತಾತ್ತ್ವಿಕ ಸೃಷ್ಟಿ. ಆದರೆ, ಹಾಮೂರಾಬಿಯದು ಮುಖ್ಯವಾಗಿ ಲೌಕಿಕ ಮತ್ತು

ಪ್ರಯೋಜನ ದೃಷ್ಟಿ. ಅವನಿಗೆ ಚಿರಂತನ ತತ್ವಗಳ ಬಗ್ಗೆ ವಿಶ್ವಾಸವಿಲ್ಲ.

೨. ಇಬ್ಬರೂ ಪ್ರಾಚೀನ ಶಾಸನಕಾರರಾದರೂ, ಇಬ್ಬರೂ ತಾರತಮ್ಯ ತತ್ವಗಳನ್ನೂ, ಪ್ರತೀಕಾರ ನ್ಯಾಯವನ್ನು ಒಪ್ಪಿದರೂ, ಮನುವಿನಲ್ಲಿ 'ನಾಗರಿಕತೆ'ಯ ಲಕ್ಷಣಗಳು ಅಧಿಕವಾಗಿವೆ.

೩. ಮನುವು ಕೆಲವು ಸಂಬಂಧಗಳಿಗೆ, ಕೆಲವು ಸಂಸ್ಥೆಗಳಿಗೆ, ಧರ್ಮದ ಪಾವಿತ್ರ್ಯದ ಮುದ್ರೆಯನ್ನು ಒತ್ತಿದ್ದಾನೆ. ಉದಾಹರಣೆಗೆ, ಹಾಮೂರಾಬಿಯ ಪ್ರಕಾರ ವಿವಾಹವು ಒಂದು ಒಪ್ಪಂದವಾದರೆ, ಮನುವಿನ ದೃಷ್ಟಿಯಲ್ಲಿ ಅದೊಂದು ಧಾರ್ಮಿಕ ಸಂಸ್ಕಾರ, ಮುರಿಯದಂಥ ಬಂಧನ.

೪. ಮನುವು ಹಾಮುರಾಬಿಗಿಂತ ಹೆಚ್ಚು ಸಂಪ್ರದಾಯವಾದಿ. ಈ ಕಾರಣದಿಂದಾಗಿಯೇ ಅವನು ಸನಾತನ ಧರ್ಮವನ್ನು ದೃಢ ಪಡಿಸಲು ಸಾಧ್ಯವಾಗಿರಬೇಕು.

೫. ಪ್ರಜೆಗಳು ಕಳೆದುಕೊಂಡ ಆಸ್ತಿಯನ್ನು ನಗರದ ಆಡಳಿತಗಾರನು ಹುಡುಕಲಿ ಅಥವಾ ಹಾನಿಯನ್ನು ತುಂಬಿಕೊಡಲಿ ಎಂದು ಹಾಮೂರಾಬಿ ಹೇಳಿದಂತೆ, ಮನುವೂ ಕೂಡ ಅದು ರಾಜನ ಹೊಣೆಗಾರಿಕೆಯೆಂದು ಒಪ್ಪಿದ್ದಾನೆ. ಆದರೆ ಹಾಮೂರಾಬಿಯದು ತಾತ್ವಿಕ ನಿಲುವು ಮಾತ್ರವಲ್ಲ; ಅದು ರಾಜನ ಆದೇಶ. ಅತಿ ಸ್ಪಷ್ಟ ಶಬ್ದಗಳಲ್ಲಿ ಹಾಗೂ ಅಧಿಕಾರಯುತವಾಗಿ ನಷ್ಟ ಪರಿಹಾರಕ್ಕಾಗಿ ಹೊರಡಿಸಿದ ಆಜ್ಞೆ.

ಅಧ್ಯಾಯ ೧೨

ಪ್ರಥಮ ಸಮಾಜ ಚಿಂತಕ

ನಮಗೆ ತಿಳಿದ ಮಟ್ಟಿಗೆ ಹಾಮೂರಾಬಿ ಜಗತ್ತಿನ ಪ್ರಥಮ ಮಹಾನ್ ಶಾಸಕ. ಹಾಮೂರಾಬಿಯ ಶಾಸನದಲ್ಲಿ ಅನಾಗರಿಕ ಜನಾಂಗದ ತಾರತಮ್ಯಗಳೂ ಕ್ರೌರ್ಯವೂ ಕಂಡುಬರುವುದು ನಿಜವಾದರೂ ಪ್ರಾಚೀನ ಜಗತ್ತಿನಲ್ಲಿ ಅದಕ್ಕೆ ಸದೃಶವಾದ ಬೇರೆ ಶಾಸನವಿಲ್ಲ. ವಿಲ್ ಡ್ಯುರಾಂಟರು ಹೇಳುವಂತೆ "ಹಾಮೂರಾಬಿಯ ಶಾಸನ ಪ್ರಾಚೀನ ಜಗತ್ತಿಗೆ ಕೊಟ್ಟ ಒಂದು ಅಮೂಲ್ಯ ದೇಣಿಗೆ. ಅದು ರೋಮನ್ನರು ಆಧುನಿಕ ಜಗತ್ತಿಗೆ ಕೊಟ್ಟ ಸರಕಾರ ಮತ್ತು ಸುವ್ಯವಸ್ಥೆಗಳಿಗೆ ಸಮನಾದ ಕಾಣಿಕೆ." ('ನಮ್ಮ ಪೌರ್ವಾತ್ಯ ಪರಂಪರೆ', ಪುಟ ೨೬೪)

ಹೀಗಿದ್ದರೂ ನಾವು ಹಾಮೂರಾಬಿಯನ್ನು ಮಹಾನ್ ಚಿಂತಕನ ಪಟ್ಟಕ್ಕೆ ಏರಿಸಬೇಕೆಂದೇನೂ ಇಲ್ಲ. ಭಾರತದ ಮನುವಿನಂತೆ ವಿಶ್ವ ಮತ್ತು ಮಾನವ ಸಂಬಂಧಗಳನ್ನು ಕುರಿತ ಜಿಜ್ಞಾಸೆಯನ್ನು ಈತ ಮಾಡುವುದಿಲ್ಲ. ಈತ ಧರ್ಮಶಾಸ್ತ್ರವನ್ನು ಬರೆಯಹೊರಟವನಲ್ಲ; ದಾರ್ಶನಿಕನೂ ಅಲ್ಲ. ಶಾಸನದ ಪ್ರಾರಂಭದಲ್ಲಿ ತಾನು ದೇವರ ಪ್ರತಿನಿಧಿಯೆಂದು ಹೇಳಿಕೊಂಡಿದ್ದರೂ ಮುಂದೆ ದೇವರನ್ನು ಸಹ ಮರೆತುಬಿಟ್ಟಿದ್ದಾನೆ. ಸೂರ್ಯದೇವನಿಂದ ಸೂತ್ರಗಳನ್ನು ಪಡೆಯುತ್ತಿರುವ ಚಿತ್ರವನ್ನು

ಕೊರೆದಿದ್ದರೂ ಅದು ಪ್ರಜೆಗಳಿಗೆ ಶಾಸನದ ಮಹತ್ವವನ್ನು ಬಿಂಬಿಸುವ ಉದ್ದೇಶ ಹೊಂದಿದೆಯೇ ಹೊರತು ಅದು ಹಾಮೂರಾಬಿಯ ದೈವ ಭಕ್ತಿಯನ್ನು ತೋರಿಸುವುದಿಲ್ಲ. ಅವನದು ಮುಖ್ಯವಾಗಿ ಲೌಕಿಕ ದೃಷ್ಟಿ.

ಅವನನ್ನು ಮಹಾನ್ ಚಿಂತಕರ ಪಟ್ಟಕ್ಕೆ ಏರಿಸುವ ಅಗತ್ಯವಿಲ್ಲ ಎಂದು ಹೇಳಿದೆವು. ಹಾಗೆ ಹೇಳಲು ಇನ್ನೊಂದು ಕಾರಣವಿದೆ. ಶಾಸನಗಳು ಅವನಿಂದ ಪ್ರಣೀತವಾದುವು, ನಿಜ. ಆದರೆ ಎಲ್ಲವನ್ನೂ ಅವನೇ ಹುಟ್ಟುಹಾಕಿಲ್ಲ. ಅನೇಕ ನ್ಯಾಯಸೂತ್ರಗಳು ಅವನ ಪೂರ್ವಜರಿಂದ ಬಂದಿವೆ. ಮುಖ್ಯವಾಗಿ ಸುಮೇರು ಮತ್ತು ಅಕ್ಕಡದ ಶಾಸಕರ ವಿಚಾರಗಳನ್ನು ಅವನು ಬಹಳವಾಗಿ ಬಳಸಿಕೊಂಡಿದ್ದಾನೆ ಎಂದು ಈಚೆಗಿನ ಸಂಶೋಧನೆಗಳಿಂದ ತಿಳಿದುಬರುತ್ತದೆ. ಕೆಲವೊಮ್ಮೆ ಅವುಗಳಲ್ಲಿ ಸ್ವಲ್ಪ ಮಾರ್ಪಾಟು ಮಾಡಿಕೊಂಡಿದ್ದಾನೆ ಅಷ್ಟೆ! ಇದೂ ಅಲ್ಲದೆ ಪ್ರತೀಕಾರ ನ್ಯಾಯತತ್ವ ಆಧುನಿಕರ ಮನಸ್ಸಿಗೆ ಒಗ್ಗಲಾರದು ಎಂಬ ಮಾತೂ ನಿಜ.

ಈ ಹಿನ್ನೆಲೆಯಲ್ಲಿ ಪರಾಮರ್ಶೆಮಾಡಿ ಹೇಳಬಹುದಾದುದು ಇಷ್ಟು:

ಒಂದು, ಹಾಮೂರಾಬಿಯೇ ಜಗತ್ತಿನ ಪ್ರಥಮ ಚಿಂತಕನೇನೂ ಅಲ್ಲದಿರಬಹುದು. ಆದರೆ ನಮಗೆ ಗೊತ್ತಿರುವ ಅತಿ ಪ್ರಾಚೀನನೆಂದರೆ ಅವನೇ. ಆದುದರಿಂದ ಆ ಪಟ್ಟ ಅವನಿಗೆ ಸಲ್ಲಬೇಕು.

ಎರಡು, ತನಗಿಂತ ಹಿಂದಿನ ಜನರ ಅನುಭವಗಳನ್ನೂ ವಿಚಾರಗಳನ್ನೂ ಕ್ರೋಢೀಕರಿಸಿ ತನ್ನ ಶಾಸನಗಳ ಮೂಲಕವಾಗಿ ಆ ಜ್ಞಾನವನ್ನು ಪ್ರಸಾರಮಾಡಿದ ಶ್ರೇಯಸ್ಸು ಅವನದು.

ಮೂರು, ಮೋಸೆಸ್‌ನ ಶಾಸನ, ರೋಮನ್ನರ ಶಾಸನ ಹಾಗೂ ಆಧುನಿಕ ಶಾಸನಗಳಿಗೂ ಭೀಜಪ್ರಾಯವಾದ ವಿಚಾರಗಳೂ ಅವನ ಶಾಸನದಲ್ಲಿವೆ.

ನಾಲ್ಕು, ಮನುವಿನ ಹೊರತಾಗಿ ಮತ್ತೆ ಯಾವ ಪ್ರಾಚೀನ ಶಾಸನಕಾರನೂ ಅವನಂಥ ಕಾಣಿಕೆಯನ್ನು ಜಗತ್ತಿಗೆ ಕೊಟ್ಟಿಲ್ಲ.

ಐದು, ನಾಲ್ಕು ಸಾವಿರ ವರ್ಷದಷ್ಟು ಹಿಂದೆ ಸಾಮಾಜಿಕ ನ್ಯಾಯದ ಸ್ಥೂಲ ಕಲ್ಪನೆಯಾದರೂ ಅವನಲ್ಲಿತ್ತು ಎಂಬುದು ಹೆಮ್ಮೆಯ ಮಾತು.



ಸಾಮಾಜಿಕ ಚಿಂತನ ಮಾಲೆ